Sri H. SIDDAVEERAPPA.—I am not concerned with what the courts will say. Now the position is this. The Hon'ble Member from Kolar may please scan section 10. Though, no doubt, it may be construed that any other private agency may be licensed, I have made it clear—supposing I ask or direct one of our Government factories like the Government Industrial Workshop or the Hassan Implements Factory to manufacture these—even they will have to be licensed by the concerned officer. The licence cannot be avoided. That is clear even though a Government agency or a Government industry or workshop has to do it. Even supposing it is manufactured in the Government Industrial Workshop, where is the guarantee that some mischief will not be played ? Who is going to control it ?

I am only thinking that, human ingenuity being what it is, some mischief may take place even in the Government workshop, some under-measures, under-weights may be manufactured. I am only putting up a plausible point for argument.

Sri V. M. MASCARENHAS.—It is not only in the manufacture but in the issue the Government takes the fullest responsibility. There are two stages. The first is manufacture; the second

is issue which is more important in my opinion. For the issue the Government must take the fullest responsibility.

Sri T. MARIAPPA.—If Clause 10 were to stand as it is, he will be able to refuse license to a private individual. On reasonable grounds he can refuse. It is not easy.

Sri S. R. NAGAPPA SETTY (Shimoga).—If the Government issues instructions to a concern to manufacture weights and measures, where is the necessity for the issue of any licence to the very same concern by the Government? The Minister sadi that if he issues instructions to the Mysore Implements Factory to mance facture weights and measures, onu-again licence should be issued to the very same concern. Where is the necessity?

Sri S. SRINIVASA IYENGAR.—I will continue. Under Clause 16, the Government seem to create the Inspectors to be virtual dictators.

Sri H. SIDDAVEERAPPA.—Don't forget there are supervisory officers.

Sri S. SRINIVASA IYENGAR.—Sub-clause (2) of Clause 16 reads as ollows :

> "For the purpose of such inspection, the Inspector may at all reasonable times enter and search the business premises of any trader."

There is no time limit. 'All reasonable times' is left to the Inspector. He can say it is a reasonable time and enter for the purpose of search any business premises. The business premises is defined in sub-clause (3) :

> "Where a building is used by a trader partly for dwelling purposes and partly for business purposes, the whole of such building shall, for the purposes of this section be deemed to be his business premises."

If, suppose there is a poor trader who has simply a small area as his shop in his house and uses the rest of the house for his residential purpose. The Inspector construes the entire building as a business premises and may enter that building at times that he considers reasonable. It is a very wide power entrusted to the Inspector. Such a provision was made in the Sales Tax Act also. In the Sales Tax (Amendment) Bill a provision of this type was also provided and in this House there was discussion on that and in the Select Committee I think we have amended that provision. I feel that such a provision in this Bill would be too wide and the people will be put to hardship. The Inspector may abuse such a power.

Sri H. SIDDAVEERAPPA.—We start with the assumption that human nature is good unless the contrary is proved.

Sri S. SRINIVASA IYENGAR.—The next provision to which I would like to refer is under clause 27—sub-clause (2). It reads as follows :

> "Whoever knowingly us's, sells, utters, disposes of or exposes for sale any weight or measure or weighing or measuring instrument with such forged counterfeit stamp thereon, or a weight or measure so increased or diminished shall, on conviction, be punished with rigorous imprisonment for a period which may extend to six months or with fine or with both."

I have not been able to understand the meaning of that word 'utters.'

Sri K. PATTABHIRAMAN.—It is a legal expression.

Sri S. SRINIVASA IYENGAR.—I am not a lawyer. I want to bring to the notice of this House the provision under Part V. It was agreed that all rules framed by the Government shall be placed before this House and this House has the power of amending any rule or such amendments or changes in the rules and that those changes should be incorporated in the rules; but in this Bill there is no such provision. No provision has been made to place the rules framed under this Act before the Legislature and also to make changes as this House would make and to incorporate the changes as this House would make.

(SRI S. SRINIVASA IYENGAR.)

Under clause 36, a provision has been made like this :

> " Where a person committing an offence under this Act is a company or other body corporate, or any association of persons (whether incorporated or not), every director, manager, secretary agent or other officer or person concerned with the management thereof shall, unless he proves that the offence was committed without his knowledge or consent, be deemed to be guilty of such offence."

Under clause 36, I think a little change might be necessary. In respect of the co-operative institutions, this clause seems to penalise every director of that institution unless he proves that he is not guilty. I want a little enlightenment on this clause on page 12. If, suppose it could be clarified now alone, I will certainly be convinced.

Sri H. SIDDAVEERAPPA.—It is quite clear.

Sri S. SRINIVASA IYENGAR.—I think it needs a little change because this Clause seems to punish every Director of the society for the offence of a salesman. Whether it could be changed or whether it could remain as it is, is a point to be considered.

Sri H. SIDDAVEERAPPA.—It is not as though 'heads, we will win and tails, we will lose.' If by the nefarious activity of the salesman, we are going to get a profit, you cannot easily escape like that. It is a well recognised principle in all body corporate that whoever is a member, he is held responsible by what is called the principle of vicarious liability.

Sri A. BHEEMAPPA NAIK.—Provision is also made that if the offence is committed with his knowledge, he will be punished.

Sri H. SIDDAVEERAPPA.—The only thing is, the burden is on him to prove ' Well, I did not do anything.'

Sri S. SRINIVASA IYENGAR.—I submit therefore that this Bill needs scrutiny and that it may not be passed now. I suggest that the Bill be referred to a Select Committee. I have also tabled a motion that the Bill be referred to a Select Committee. I have given the names. I leave it to the House to accept it.

*ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಅಳತೆ ಮತ್ತು ತೂಕದ ಸಾಧನಗಳಿಗೆ ಸಂಬಂಧಪಟ್ಟ ಈ ಮಸೂದೆಯ ವಿಷಯದಲ್ಲಿ ಈಗಾಗಲೇ ಸ್ವಲ್ಪಮಟ್ಟಿಗೆ ಚರ್ಚೆಯಾಗಿದೆ. ಮನುಷ್ಯನು ಅನಾದಿಕಾಲದಿಂದಲೂ ತನ್ನ ಅನುಭವದ ಮೇಲೆ ತನ್ನ ಅವಶ್ಯಕತೆಗನುಗುಣವಾಗಿ ಅನೇಕಾನೇಕ ವಿಚಾರಗಳನ್ನು ಕಂಡುಹಿಡಿದಿದ್ದಾನೆ. ಹಾಗೆ ಆತನು ಕಂಡುಹಿಡಿದಿರತಕ್ಕ ಅನೇಕ ವಿಚಾರಗಳಲ್ಲಿ ಈ ಅಳತೆ ಮತ್ತು ತೂಕದ ಸಾಧನವೂ ಒಂದಾಗಿದೆ. ಆದರೆ ಇದರಲ್ಲಿ ಯಾವುದೂ ಸ್ಟ್ಯಾಂಡರ್ಡ್ ಅಲ್ಲ. ಒಂದೊಂದು ದೇಶದಲ್ಲಿ ಒಂದೊಂದು ಸಾಮಾನಿನ ಮಾರಾಟ ಒಂದೊಂದು ರೀತಿಯಾಗಿದೆ. ಈ ಅಳತೆ ಮತ್ತು ತೂಕದ ಸಾಧನಗಳನ್ನು ಎಲ್ಲಾ ದೇಶದವರೂ ಒಂದು ರೀತಿಯಾಗಿ ಇಟ್ಟುಕೊಂಡಿಲ್ಲ, ಅಂದರೆ ಆಯಾ ದೇಶದಲ್ಲಿ ಸಾಮಾನುಗಳನ್ನು ಬೆಳೆಯತಕ್ಕವರೂ ಇಲ್ಲಪೇ ಅವುಗಳನ್ನು ಉತ್ಪತ್ತಿ ಮಾಡತಕ್ಕವರೂ ಮತ್ತು ಅವುಗಳನ್ನು ಕೊಂಡುಕೊಳ್ಳತಕ್ಕವರೂ ಈ ಇಬ್ಬರ ಅನುಮತಿಯ ಮೇಲೆ ನಿಂತುಕೊಂಡು ಬಂದಂಥ ಸಾಧನಗಳೇ ಈ ದಿವಸದ ಅಳತೆ ಮತ್ತು ತೂಕದ ಸಾಧನಗಳಾಗಿರುತ್ತವೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಆ ಕೈತೂಕ ಮತ್ತು ಬಾಯ್ ಬಣ್ಣವೋ ?

ಶ್ರೀ ಎಸ್. ಗೋಪಾಲಗೌಡ.—ಹೌದು ಹಿಂದೆ ಅದೂ ಇತ್ತು. ಅಷ್ಟೇಅಲ್ಲ, ಆಗ ಇನ್ನೂ ಈ ಕೈ, ಕಾಲುಗಳನ್ನು ತೋರಿಸತಕ್ಕಂಥ ವಿಧಾನ ಕೂಡ ಇತ್ತೆಂದು ತಿಳಿದುಬಂದಿದೆ. ಎಷ್ಟು ಎತ್ತರ, ಎಷ್ಟು ದಪ್ಪ, ಎಷ್ಟು ಉದ್ದ ಅನ್ನತಕ್ಕ ಬಗ್ಗೆ ಕೈ, ಕಾಲು, ಕಣ್ಣುಗಳನ್ನೆಲ್ಲಾ ಉಪಯೋಗಿಸುತ್ತಿದ್ದರೆಂದು ಹೇಳುತ್ತಾರೆ. ಆದರೆ ಎಲ್ಲಾ ದೇಶಗಳಿಗೂ ಅನ್ವಯಿಸುವಂಥ ಅಳತೆ ಮತ್ತು ತೂಕದ ಸಾಧನಗಳು ಇಲ್ಲಿಯವರೆಗೂ ಇಲ್ಲ. ಹೀಗಾಗಿ ಈ ದಿವಸ ಪ್ರತಿಯೊಂದು ದೇಶದಲ್ಲೂ ಪ್ರತಿಯೊಂದು ರಾಷ್ಟ್ರದಲ್ಲೂ ಒಂದೊಂದು ವಸ್ತುವಿಗೆ ಒಂದೊಂದು ರೀತಿಯಾಗಿ ಈ ಅಳತೆ ಮತ್ತು ತೂಕದ ಸಾಧನಗಳಿರತಕ್ಕದ್ದು ಕಂಡುಬರುತ್ತದೆ. ಈ ದಿವಸ ನಾವು ಪರರಾಷ್ಟ್ರಗಳೊಡನೆ ಅಂದರೆ ನಮ್ಮ ಇಂಡಿಯಾ ದೇಶದಲ್ಲೇ ಅಲ್ಲದೆ ಹೊರಗಿನ ರಾಜ್ಯಗಳೊಡನೆ ಸಹ ಎಷ್ಟೋ ವ್ಯವಹಾರಗಳನ್ನು ನಡೆಸುತ್ತಿದ್ದೇವೆ. ಈ ದಿವಸ ನಾವು ಅಂತರ್ ರಾಷ್ಟ್ರೀಯ ವ್ಯವಹಾರದಲ್ಲಿ ತೊಡಗಿ ಎಷ್ಟೋ ಮಾಲುಗಳನ್ನು ಹೊರಗಡೆಯಿಂದ ತರಿಸುತ್ತಿದ್ದೇವೆ. ಹೊರಗಡೆಗೆ ಇಲ್ಲಿಂದ ನಮ್ಮ ಮಾಲುಗಳನ್ನು ರವಾನೆ ಮಾಡುತ್ತಿದ್ದೇವೆ. ಇದು ಸಾಧಾರಣವಾಗಿ ಇಂದಿಗೂ ನಡೆದುಕೊಂಡು ಬರುತ್ತಲೇ ಇದೆ, ಆದರೆ ಈ ಅಳತೆ ಮತ್ತು ತೂಕಗಳ ಬಗ್ಗೆ ಒಂದು ಯೂನಿವರ್ಸಲ್ ಆದಂಥ ಸ್ಟ್ಯಾಂಡರ್ಡ್ ವೈಟ್ಸ್ ಅಂಡ್ ಮೆಷರ್ಸ್‌ಗಳಿರುವುದಿಲ್ಲ. ಆದರೆ ಇನ್ನು ಮುಂದಕ್ಕಾದರೂ ನಾವು ಈ ಬಗ್ಗೆ ಒಂದು ಯೂನಿವರ್ಸಲ್ ಸ್ಟ್ಯಾಂಡರ್ಡ್ ವೈಟ್ಸ್ ಅಂಡ್ ಮೆಷರ್ಸ್‌ಗಳನ್ನು ಜಾರಿಗೆ ತರುವಂಥ ಪ್ರಯತ್ನ ನಡೆಸಬೇಕಾಗಿದೆ. ಹಾಗೆ ಮಾಡದೆ ನಾವೀದಿವಸ ಕೇವಲ ಈ ನಮ್ಮ

ಮೈಸೂರು ರಾಜ್ಯಕ್ಕೆ ಅನುಗುಣವಾಗತಕ್ಕ ರೀತಿಯಲ್ಲಿ ನಾವು ಇದನ್ನು ವ್ಯವಸ್ಥೆಗೊಳಿಸಿದರೆ ಸಾಲದು. ಈ ಬಗ್ಗೆ ಎಲ್ಲಾ ಕಡೆಗಳಲ್ಲಯೂ ಒಂದು ಏಕ ರೀತಿಯ ಪ್ರಯತ್ನಗಳು ನಡೆಯಬೇಕಾಗಿದೆ. ಈಗ ಒಂದು ಗಜ ಅನ್ನುವುದಕ್ಕೆ ಒಂದು ಅಂಗೀಕೃತವಾದ ಗಜದ ಅಳತೆ ಇದೆ. ಒಂದು ಫರ್ಲಾಂಗ್ ಅನ್ನುವುದಕ್ಕೂ ಕೂಡ ಇದೇರೀತಿ ಅಂಗೀಕೃತವಾದ ಒಂದು ಲೆಕ್ಕವಿದೆ. ಇದರಂತೆಯೇ ಎಲ್ಲಾ ಕಡೆಗಳಲ್ಲೂ ಈ ತೂಕದ ಮತ್ತು ಅಳತೆಯ ಸಾಧನಗಳ ಬಗ್ಗೆ ಒಂದು ಅಂಗೀಕೃತವಾದಂಥ ಸ್ಟ್ಯಾಂಡರ್ಡ್ ಸಾಧನಗಳನ್ನಿಟ್ಟುಕೊಳ್ಳಲು ಏರ್ಪಾಡಾಗಬೇಕು. ಯಾರು ಬಟ್ಟೆ ಕೊಳ್ಳುತ್ತಾನೆ, ಯಾರು ಎಣ್ಣೆ ಕೊಳ್ಳುತ್ತಾನೆ ಆತನು ಆಯಾ ಅಳತೆಗೆ ಅನುಗುಣವಾಗಿ ನಡೆಯದೆ ಜನರಿಗೆ ಮೋಸ ಮಾಡಿದರೆ ಅವನು ಶಿಕ್ಷೆಗೆ ಒಳಗಾಗುತ್ತಾನೆ. ಯಾರು ಸ್ಟ್ಯಾಂಡರ್ಡ್ ಗಜದ ಕೋಲನ್ನು ಸರಿಯಾಗಿ ಉಪಯೋಗಿಸುವುದಿಲ್ಲವೋ ಅವರು ಆ ಶಿಕ್ಷೆಗೆ ಒಳಗಾಗಲೇಬೇಕು. ಆದರೆ ನಮ್ಮ ಸಂಸ್ಥಾನದಲ್ಲಿ ಈ ದಿವಸ ಅನೇಕ ಕಸ್ಟಂಸ್‌ಗಳಿವೆ (ರೂಢಿ). ಹೀಗೆ ಬಹಳ ದಿವಸಗಳಿಂದಲೂ ಕೆಲಕೆಲವು ವಿಷಯಗಳು ರೂಢಿಯಲ್ಲಿ ನಡೆದುಕೊಂಡು ಬಂದು ಬಿಟ್ಟಿವೆ. ಆದರೆ ನಾವೀಗ ಮುಖ್ಯವಾಗಿ ಯಾವುದಕ್ಕೆ ಹೆಚ್ಚಿನ ಗಮನ ಕೊಡಬೇಕಾಗಿದೆಯೆಂದರೆ ಭತ್ತ, ರಾಗಿ, ಜೋಳ, ಇತ್ಯಾದಿ ಸಾಮಾನುಗಳ ಅಳತೆಯ ವಿಚಾರಕ್ಕೆ ಪ್ರಾಧಾನ್ಯತೆ ಕೊಡಬೇಕಾಗಿದೆ. ಕಾರಣವೇನೆಂದರೆ, ಸಾಧಾರಣವಾಗಿ ಈಗ ಪ್ರತಿಯೊಂದು ಬಿಲ್ಲೆಯಲ್ಲಿಯೂ ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲಯೂ ಈ ಅಳತೆ ಸಾಧನಗಳ ಬಗ್ಗೆ ನಾನಾ ರೀತಿಯಾಗಿದೆ. ಈ ಬಳ್ಳ, ಕೊಳಗ, ವಣ, ಖಂಡಿ, ಎಂದು ಏನೇನೋ ಬೇರೆ ಬೇರೆ ಸಾಧನೋಪಾಯಗಳು ಹಾಲ ಜಾರಿಯಲ್ಲಿರುವುದು ನನ್ನ ಅನುಭವಕ್ಕೆ ಬಂದಿದೆ. ನಮ್ಮ ಪ್ರಾಂತ್ಯದಲ್ಲೂ ಸಹ ಇಂಥಾದ್ದೊಂದು ಸ್ಟ್ಯಾಂಡರ್ಡ್ ಮೆಷರ್ ಎಂದು ಇಲ್ಲವೇ ಇಲ್ಲ. ಯಾರೋ ಒಬ್ಬ ಬಡಗಿ ಒಂದು ಹಲಸಿನ ಮರದ ತುಂಡನ್ನು ಕೆತ್ತಿ ತಂದು ಅದನ್ನು ಒಂದು ಕೊಳಗ ಎಂದು ಮಾಡಿ ಕೊಟ್ಟುಬಿಡುತ್ತಾನೆ. ಅದಕ್ಕೆ ಯಾವ ಸ್ಟ್ಯಾಂಪೂ ಇಲ್ಲ, ಸೀಲೂ ಇಲ್ಲ. ಅದು ಸಾಧಾರಣವಾಗಿ ಈ ಜೈಲು ಸೇರಿನ ಅಳತೆಯಲ್ಲಿ $2\frac{1}{2}$ ಸೇರು ಇರುತ್ತದೆ. ಇದನ್ನೇ ಅವರು ಕೊಳಗ ಎಂದು ಉಪಯೋಗಿಸುತ್ತಿದ್ದಾರೆ. ಇನ್ನು ಕೆಲವು ಕಡೆ ಈ ಮೇದಾರರು ಹೆಣೆದ ಬುಟ್ಟಿಗಳನ್ನೂ ಸಹ ಕೊಳಗದಂತೆ ಉಪಯೋಗಿಸುತ್ತಿದ್ದಾರೆ. ಅದನ್ನು 10 ಸೇರಿನ ಬುಟ್ಟಿ ಎಂದು ಕರೆಯುತ್ತಾರೆ. ಇದರಲ್ಲಿ ಐದು ಸೇರಿನ ಬುಟ್ಟಿಗಳೂ ಇವೆ. 20 ಬುಟ್ಟಿ ಹಾಕಿದರೆ 100 ಸೇರು ಆಗುತ್ತದೆ.

11-30 A.M.

ಈ ಬುಟ್ಟಿಗಳನ್ನು ಮಾಡುವಾಗ ಅವು ದೊಡ್ಡದಾದರೂ ಆಗಬಹುದು, ಚಿಕ್ಕದಾದರೂ ಆಗಬಹುದು. ಅದನ್ನು ಹೆಣೆಯತಕ್ಕ ವಸ್ತುವಿನ ಮೇಲೆ ಮತ್ತು ಮನುಷ್ಯನ ಮೇಲೆ ಅವಲಂಬಿಸಿರುತ್ತದೆ.

ನಮ್ಮ ಕಡೆ ಗೇಣಿ ಪದ್ಧತಿ ಜಾರಿಯಲ್ಲಿದೆ. ಇದರಲ್ಲಿ ಏನಾಗಿದೆ ಎಂದರೆ ಪತ್ರ ಬರೆಸತಕ್ಕ ಪ್ರತಿಯೊಬ್ಬ ಮನುಷ್ಯನೂ ಸಹ 40 ಸೇರಿನ ಮಣ ಅಂದರೆ 11 ಸೇರಿನ ಗುಂಡಿನಲ್ಲಿ ನಾಲ್ಕು ತೂಕ ಹಾಕಬೇಕು. ಹಳ್ಳಿಗಳ ಕಡೆ ಕಲ್ಲಿನ ಗುಂಡುಗಳು, ಸೀಸದ ಗುಂಡುಗಳು ಅಥವ ಕಬ್ಬಿಣದ ಗುಂಡುಗಳಿರುತ್ತವೆ. ತಕ್ಕಡಿಗಳಿವೆ. ಇವುಗಳಿಗೆ ಬಗಣಿ ಮರದಲ್ಲಿ ಕೋಲು ಮಾಡುತ್ತಾರೆ. ಇದನ್ನು ಮಾಡುವಾಗ ಅಂದಾಜಿನ ಮೇಲೆ ಮಾಡುತ್ತಾರೆ. ಯಾವ specification ನಹ ಇಟ್ಟುಕೊಂಡು ಮಾಡುವುದಿಲ್ಲ. ಇದಕ್ಕೆ ಮಧ್ಯೆ ಒಂದು ಹುರಿ ಕಟ್ಟಿರುತ್ತಾರೆ. ಬೆತ್ತ ಅಥವ ಬಿದಿರಿನಿಂದ ಹೆಣೆದ ತಟ್ಟಿಗಳನ್ನು ಈ ಕೋಲಿನ ಎರಡು ತುದಿಗಳಿಗೂ ಕಟ್ಟಿರುತ್ತಾರೆ. ಇಂತಹ ತಕ್ಕಡಿಗಳಲ್ಲಿ ಅಡಿಕೆ ತೂಗುತ್ತಾರೆ. ಈ ತಕ್ಕಡಿಯನ್ನು ಹಿಡಿದಾಗ ದಂಡಿಗೆ ಅಂದರೆ ತಕ್ಕಡಿಗೆ ಉಪಯೋಗಿಸಿರುವ ಕೋಲು ಸಮನಾಗಿ ನಿಂತರೆ ಅಲ್ಲಿಗೆ ತೂಕ ಸರಿಯಾಗಿದೆ ಎಂದು ಅಭಿಪ್ರಾಯ. ಈ ತಕ್ಕಡಿಗಳಲ್ಲಿ ಅಡಿಕೆಯನ್ನು ತೂಕ ಮಾಡಿಸಲು ಹೋಗುವವರು ತೂಕ ಮಾಡುವವರಲ್ಲಿ ನಿಪುಣರಾದವರನ್ನೇ ಆರಿಸಿ ಕರೆದುಕೊಂಡು ಹೋಗುತ್ತಾರೆ. ಅವನು ಅದರಲ್ಲಿ ಬಹಳ ನಿಸ್ಸೀಮನಾಗಿ ಇರುತ್ತಾನೆ, ತಕ್ಕಡಿಯನ್ನು ಸಮನಾಗಿ ನಿಲ್ಲಿಸಿದಹಾಗೆ ಮಾಡಿ ತೂಕ ಮಾಡುತ್ತಿರುವ ಪದಾರ್ಥವನ್ನು ತಕ್ಷಣ ನುರಿದುಬಿಡುತ್ತಾನೆ. ಮಲೆನಾಡಿನ ಕಡೆ ಕೊಳಗಗಳಿವೆ. ಈ ಕೊಳಗಗಳೂ ಅಷ್ಟೆ. ಮರದಲ್ಲಿ ಇವುಗಳನ್ನು ಮಾಡಿಸಿ ಅದಕ್ಕೆ ಸುತ್ತಲೂ ಕಬ್ಬಿಣದ ಕಟ್ಟುಗಳನ್ನು ಹಾಕಿಸಿರುತ್ತಾರೆ. ಕೆಲವು ಆಗರ್ಭ ಶ್ರೀಮಂತರೂ ಸಾವಿರ ಗಟ್ಟಲೆ ಪಲ್ಲ ಅಳೆಸುವವರೂ ಹಿತ್ತಾಳೆ ಅಥವಾ ತಾಮ್ರದಲ್ಲಿ ಅನ್ನ ಬಸಿಯುವ ಚರಿಗೆಯ ನಮೂನೆಯಲ್ಲಿ ಮಾಡಿಕೊಂಡಿರುತ್ತಾರೆ. ಇದು ಸುಮಾರು 3–$3\frac{1}{2}$ ಸೇರು ಧಾನ್ಯವನ್ನು ಒಳಗೊಳ್ಳುತ್ತದೆ. ಇಂಥದರಲ್ಲಿ 20 ಕೂಡಬೇಕು. 20 ಕೊಳಗಕ್ಕೆ ಒಂದು ಖಂಡಗ. ಸಾಮಾನ್ಯವಾಗಿ $2\frac{1}{2}$ ಸೇರಿನ 20 ಕೊಳಗ ಕೊಡುವುದು ನಮ್ಮ ಕಡೆ ವಾಡಿಕೆ ಇದೆ. ಆದರೆ ಗೇಣಿದಾರನು $3\frac{1}{4}$ ಅಥವಾ $3\frac{1}{2}$ ಸೇರು ಹಿಡಿಯುವ ಕೊಳಗದಲ್ಲಿ 20ರಂತೆ ಅಳೆಸುತ್ತಾನೆ. ಇದರ ಜೊತೆಗೆ ಜಳ್ಳು ಬರುತ್ತದೆ, ಇಳವರಿ ಬರುತ್ತದೆ ಎಂದು ಅದಕ್ಕೆಲ್ಲಾ ಹಾಕಿಸಿಕೊಳ್ಳುತ್ತಾನೆ. ಹೀಗೆ ಒಪ್ಪಿಕೊಂಡಿರುವುದರ ಜೊತೆಗೆ ಒಂದೆರಡು ಕೊಳಗ ಜಾಸ್ತಿ ಕೊಡಬೇಕು.

ಈ ಸಂದರ್ಭದಲ್ಲಿ ಮಾನ್ಯ ಸಭೆಯ ಗಮನಕ್ಕೆ ಒಂದು ವಿಷಯವನ್ನು ತರಬೇಕೆಂದಿದ್ದೇನೆ: ಕಾಗೋಡು ಹೋರಾಟದಲ್ಲಿ ಒಳಗೊಂಡಿರತಕ್ಕಂಥ ಅಂಶ ಆಷ್ಟೇನೂ ಪ್ರಮಾದವಾದುದಲ್ಲ. ಜಮೀನ್ದಾರರು ರೈತರಿಗೆ ಭೂಮಿಯನ್ನು ಬಿಟ್ಟುಹೋಗಬೇಕೆಂದು ಹೇಳಲೇ ಇಲ್ಲ, ವಿವಾದ ಬಂದದ್ದು ಬಹಳ ಸಣ್ಣದು. ಇಲ್ಲಿ 70 ಸೇರಿನ ಖಂಡುಗ, 65 ಸೇರಿನ ಖಂಡುಗ, 60 ಸೇರಿನ ಖಂಡುಗ ಹೀಗೆ ಇದೆ. ಒಬ್ಬೊಬ್ಬ ಜಮೀನ್ದಾರನಿಗೆ ಒಂದೊಂದು ರೀತಿ ಇದೆ. 70 ಸೇರಿನಂತೆ 10 ಚೀಲ ಕೊಡಬೇಕು, 65 ಸೇರಿನಂತೆ 10 ಚೀಲ ಕೊಡಬೇಕು, 60 ಸೇರಿನಂತೆ 10 ಚೀಲ ಕೊಡಬೇಕು ಎಂದು ಇದೆ. ಇದರಲ್ಲಿ ಇಷ್ಟೆ ಬಂದದ್ದು. ಜಮೀನ್ದಾರರು 70 ಸೇರಿನ ಪ್ರಕಾರ ಧಾನ್ಯ ಅಳೆಸುತ್ತಿದ್ದರು. ರೈತರೆಲ್ಲಾ ಸೇರಿ ಇನ್ನು ಮುಂದೆ 60 ಸೇರಿನಂತೆ ಕೊಡೋಣ, ಅದಕ್ಕಿಂತ ಜಾಸ್ತಿ ಯಾರೂ ಕೊಡಬಾರದು ಎಂದು ತೀರ್ಮಾನಿಸಿದರು.

Sri A. V. NARASIMHA REDDY (Bangalore South).—On a point of order. Under Chapter XIII, Rule 146 (1) says that the matter of every speech must be strictly relevant to the matter before the Assembly. The relevant matter under discussion before the Assembly is the Weights and Measures (Amendment) Bill and my friend is narrating the history of Kagadu incidents and other allied matters which are irrelevant.

(SRI A. V. NARASIMHA REDDY) The discussion should be restricted with reference to the Bill itself.

Sri S. GOPALA GOWDA.—I am only speaking about the measures in vouge in the State and how they are misused and what are the consequences. ಒಂದು concrete instance ಕೊಡುತ್ತಿದ್ದೇನೆ. ಅಂಥ ಒಂದು incident ನಡೆಯಿತು. ಅದು ಅಳತೆಗೆ ಸಂಬಂಧಪಟ್ಟುದು. ನಾನು ಮುಖ್ಯವಾಗಿ weights and measures . . . .

Mr. SPEAKER.—A relevant point is raised by the Hon'ble Member. This Bill is brought to make amendments or additional provisions to the original Act. Therefore, whether these provisions are necessary or not may be gone through and discussed instead of going through the previous history of the enactment. Therefore, I request the Hon'ble Member to speak on the provisions of this Bill.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—Necessity ಇದೆಯೇ ಅಥವಾ ಇಲ್ಲವೇ?

Mr. SPEAKER.—For the sake of reference, it may be mentioned.

ಶ್ರೀ ಮುಲ್ಕ ಗೋವಿಂದ ರೆಡ್ಡಿ.—ಈಗ ಇರ ತಕ್ಕದ್ದಾರಲ್ಲ ಏನೇನು ಹುಳುಕುಗಳಿವೆ ಎಂದು ಹೇಳು ತ್ತಿದ್ದಾರೆ. What the member is saying is perfectly relevant.

ಶ್ರೀ ಎಸ್. ಗೋಪಾಲಗೌಡ.—ಕಾಗೋಡು ವಿಷಯ ಈಗ ಹೇಳುವುದರಲ್ಲಿ my intention is not to use this opportunity to condemn the action of the Government or the then authorities. I am not using this occasion for that purpose. But I am pointing out what measures or weights are prevalent or in use in our parts because I am particularly concerned with the transactions that are taking place every day between the landlords and the tenants and between our traders and the tenants. So, I only cited an incident which revolved only on this measure.

Mr. SPEAKER.—That can be said.

Sri S. GOPALA GOWDA.—That is only relevant in connection with this measure. So, is it a point of order? I never entered into the history of the case at all. This is the point involved. ಈ ರೀತಿ ಅಲ್ಲದ್ದುದರಿಂದ ರೈತರು 60 ಸೇರಿನ ಚೀಲ ಗಳನ್ನು ಕೊಡಬೇಕು ಎಂದು ತೀರ್ಮಾನ ಮಾಡಿದರು. ಅನಂತರ ಅವರವರಲ್ಲೇ ವ್ಯತ್ಯಾಸ ಒಂದು ಕೊನೆಗೆ 65 ಸೇರು ಕೊಡಿ ಎಂದ ಡೆಪ್ಯುಟಿ ಕಮಿಷನರು ನಂಧಾನ ಮಾಡಿದರು. ಇದರಲ್ಲ ಒಡಂಬಡಿಕೆಯಾಗದೆ 70 ಸೇರಿ ನಂತೆ ಕೊಡಬೇಕು ಎಂದು ಹೇಳಿದರು. ಘರ್ಷಣೆ ಪುರುವಾಯಿತು. This is the point involved. ನಮ್ಮಲ್ಲಿ ಪ್ರತಿ ಕಡೆಯಲ್ಲೂ ಹೀಗೆಯೇ ಆಗುತ್ತಿದೆ. ಮಾನ್ಯ ಸದಸ್ಯರುಗಳಾಗಲ, ಮಂತ್ರಿಗಳಾಗಲ ನನ್ನ ಜೊತೆಯಲ್ಲಿ ಬಂದರೆ ತೋರಿಸುತ್ತೇನೆ. ಈಗ season ಮುಗಿದು ಹೋಗುತ್ತಿರುವುದರಿಂದ ಗೇಣಿ, ಗುತ್ತಿಗೆಯನ್ನು ಅಳೆಸಿಬಿಟ್ಟಿರುತ್ತಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—60, 65, 70 ಸೇರು ಉಪಯೋಗಿಸುತ್ತಾರೆಂದು ಹೇಳಿದರು. ಸೇರು ಎನ್ನುವುದು standard measure ಅಲ್ಲವೇ? ಸೇರು standard measure ಹೌದೋ ಅಲ್ಲವೋ ಅನ್ನುವುದನ್ನು ಒಪ್ಪಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—I really admit. ಸೇರು ಎನ್ನುವುದು standard. ಆದರೆ ಅದು ಎಲ್ಲಾ ಕಡೆಯೂ ಹಾಗೆ ಇಲ್ಲ. ನಮ್ಮಲ್ಲಿ ಹೇಳು ತ್ತಾರೆ. ಒಬ್ಬರು ವೈಶ್ಯರು ಇದ್ದರು. ಅವರು ಕಬ್ಬಿಣದ ಸೇರಿಗೆ ಬದಲಾಗಿ ತಾಮ್ರದಿಂದ ಸೇರು ಮಾಡಿಸಿದ್ದರು. ಬುಡದಲ್ಲಿ ತಟ್ಟಬಿಟ್ಟು ಅದರ ಕೆಳಗೆ ಹುಣಸೆ ಹಣ್ಣು ಮೆತ್ತಿದ್ದರು. ಇಂತಹ ಸೇರಿನಲ್ಲಿ ಅಳೆಯುತ್ತಲೇ ಇದ್ದರು. ತಳ ತಟ್ಟಿ ಹುಣಿಸೆ ಹಣ್ಣು ಮೆತ್ತಿದ್ದ ಸೇರಿನಲ್ಲಿ ಅಳೆಯುತ್ತಿದ್ದುದರಿಂದ ಸೇರು ಕಳ ಗಡೆ ಇಟ್ಟರೂ ಆ ಮೋಸ ಇತರರಿಗೆ ತಿಳಿಯುವ ಹಾಗೆ ಇರಲಿಲ್ಲ. ಅವರು ಅಳೆದಳೆದು ಕೊಟ್ಟದ್ದೇ ಕೊಟ್ಟದ್ದು—ಜನಗಳು ತೆಗೆದುಕೊಂಡು ಹೋದದ್ದೇ ಹೋದದ್ದು. ಒಂದು ಕಡೆ ಲೆಕ್ಕದಲ್ಲಿ ಮೋಸ, ಇನ್ನೊಂದು ಕಡೆ ಬೆಲೆ ಯಲ್ಲಿಯೂ ಜಾಸ್ತಿ ಹೀಗೆ ಮಾಡುತ್ತಿದ್ದರೆಂದು ಹೇಳುತ್ತಾರೆ. ಸರ್ಕಾರದವರಿಂದ ಒಪ್ಪಿಗೆ ದೊರೆತ ಸೇರುಗಳನ್ನೇ ಎಲ್ಲರೂ ಉಪಯೋಗಿಸುತ್ತಾರೆಂದು without questioning their *bona fides* ನಾವೂ ಸಹ ತೆಗೆದುಕೊಳ್ಳುತ್ತೇವೆ. ಎಷ್ಟು ಸೇರು ಕೊಡುತ್ತೀರಿ ಎಂದು ಕೇಳಿದಾಗ ಮೂರು ಸೇರು ಕೊಡುತ್ತೇವೆಂದರೆ ಕಣ್ಣು ಮುಚ್ಚಿಕೊಂಡು ಅಳೆಸಿ ಕೊಂಡು ಹೋಗುತ್ತೇವೆ. ಮನೆಗೆ ಹೋಗಿ ಅಳೆದರೆ $2\frac{3}{4}$ ಅಥವ $2\frac{1}{4}$ ಸೇರು ಆಗುತ್ತದೆ. ಹೀಗೆಲ್ಲ ಆಗ ಬಾರದು.

Sri H. SIDDAVEERAPPA.—It is a credit to them perhaps.

ಶ್ರೀ ಎಸ್. ಗೋಪಾಲಗೌಡ.—ಆದುದರಿಂದ ಈ ಸಂದರ್ಭದಲ್ಲಿ ನಮ್ಮಲ್ಲರತಕ್ಕ ಕೆಲವು ರೂಢಿಗಳೇನಿವೆ ಸಮಾಜದಲ್ಲಿ ಅಂಥವುಗಳನ್ನು ಸರ್ಕಾರ ಕಂಡುಕೊಂಡಿರ ಲಿಲ್ಲ. ತಕ್ಷಣ measures control ಮಾಡತಕ್ಕಂಥ ಪರಿಸ್ಥಿತಿ ಬಂದಿರಲಿಲ್ಲ. ಆ ಕಾಲದಲ್ಲಿ ಅವರವರಿಗೆ ಇಷ್ಟಬಂದಂತೆ ಏನೋ ಒಂದು ರೀತಿ ಮಾಡಿಕೊಂಡು ಹೋಗುತ್ತಿದ್ದರು. ಅದು ಒಂದು ಕಾಲವಿತ್ತು. ಇವೊತ್ತು ನಾವು ಒಂದು ಮಟ್ಟಕ್ಕೆ ಬಂದಿದ್ದೇವೆ. ವ್ಯಾಪಾರ, ಉದ್ಯಮಗಳು ಮುಂದುವರಿದಿವೆ ಮತ್ತು complicate ಆಗಿವೆ. ಆದುದರಿಂದ ಈ ವಿಷಯದ ಬಗ್ಗೆ ಸರ್ಕಾರದವರು ಸೂಕ್ತವಾದ ಪರಿಶೀಲನೆ ಮಾಡಿ ಮಾನ್ಯ ಸದಸ್ಯರು ಸಲಹೆ ಮಾಡಿರುವ ಹಾಗೆ ಅಳತೆ ಸೇರುಗಳು ಮತ್ತು ತೂಕದ ಬಟ್ಟುಗಳನ್ನು ತಯಾರು ಮಾಡುವ ಕೆಲಸವನ್ನು ಸರ್ಕಾರದವರೇ ಇಟ್ಟುಕೊಳ್ಳ ಬೇಕು. ಇಂಡಿಯಾ ಸರ್ಕಾರ currency ಮಾಡಿ ಕೊಳ್ಳುವುದನ್ನು ತಾನೇ ಇಟ್ಟುಕೊಂಡಿದೆ. ಈಗ counterfeit coins ಯಾಕೆ ತೆಗೆದುಕೊಳ್ಳುವುದಿಲ್ಲ? ಇದರಿಂದ money value ಹೆಚ್ಚುತ್ತದೆ ಅಲ್ಲದೆ ಅದನ್ನು ಮಾಡುವಾಗ ಒಂದು prescribed metal, ಒಂದು specification ಇರುತ್ತದೆ. ಹಾಗೆ ಮಾಡಲು ಎಷ್ಟು ಕಷ್ಟವೆನ್ನುವುದನ್ನ ಕೊನೆಯಲ್ಲಿ ಅರ್ಥಮಾಡಿ ಕೊಳ್ಳಬಹುದು. ಪ್ರತಿಯೊಂದನ್ನು ಮಾಡುವಾಗಲೂ

ಕೂಡ ಇಷ್ಟು specification ಪ್ರಕಾರ ಸಾಮಾನ್ಯವಾಗಿ ಬೇರೆಯವರಿಂದ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನಾವು ತಿಳಿಯಬೇಕು. ಇದರಲ್ಲಿ

> "The Mysore seer, which is a unit of capacity equivalent to the volume occupied by 108 standard tolas of air-free distilled water weighed in Standard Indian Air against brass weights having a specific gravity of 8·143."

ಸಾಮಾನ್ಯವಾಗಿ ಈ specification ಪ್ರಕಾರ ನಮ್ಮ ದೇಶದಲ್ಲಿರುವ ಯಾವ manufacturer ಸಹ ಮಾಡುವುದಕ್ಕಾಗುವುದಿಲ್ಲ. Unless there is the aid of such instruments and such people who know this, ಇವನ್ನು ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ನಾವು ಸಾಮಾನ್ಯವಾಗಿ Hassan Implements Factoryಗೆ ಕೊಟ್ಟರೂ ಅವರಿಂದಲೂ ಸಾಧ್ಯವಿಲ್ಲ. ಈ ಫ್ಯಾಕ್ಟರಿಗಳಿಂದ ಯಾರನ್ನಾದರೂ depute ಮಾಡಿ ಅವರಿಗೆ ಶಿಕ್ಷಣ ಕೊಡಿಸಿ ಬೇಕಾದ ಸಲಕರಣೆಗಳನ್ನೆಲ್ಲ ಒದಗಿಸಿಕೊಟ್ಟ ಹೊರತು ನಾವು ಮುಂದಕ್ಕೆ ಹೋಗಲು ಸಾಧ್ಯವಿಲ್ಲ. Gravity 8·143 ಎಂದು ಇವೆ. ನಮ್ಮಲ್ಲಿ manufacture ಮಾಡುತ್ತ ಇರತಕ್ಕವರಿಗೆ, it is a scientific term. ನಾನೇನೋ physics ಸ್ವಲ್ಪ ಓದಿರುವುದರಿಂದ ನನಗೆ ಅರ್ಥವಾಗುತ್ತದೆ. ಅನೇಕ ಮಹನೀಯರಿಗೆ ಇದು ಸಾಮಾನ್ಯವಾಗಿ ಅರ್ಥವಾಗುವುದಿಲ್ಲ.

Sri A. BHEEMAPPA NAIK.—It is the experts that manufacture. It is the organisation like the Central Industrial Workshop where we have got the best instruments that these measures are manufactured. It is only for them that this direction is given.

ಶ್ರೀ ಎಸ್. ಗೋಪಾಲಗೌಡ.—ತಾವು ಏನು ಹೇಳಿದಿರಿ ?

ಶ್ರೀ ಎ. ಭೀಮಪ್ಪ ನಾಯಕ್.—Distilled water—air free distilled water ಅಂದರೆ ಹೇಗೆ ಅರ್ಥವಾಗುತ್ತದೆಂದು ಹೇಳಿದೆ. ಅದನ್ನು ಅರ್ಥ ಮಾಡಿಕೊಳ್ಳುವವರಿಗೋಸ್ಕರ ಮಾಡಿರುವುದು. ಯಾರು manufacture ಮಾಡುತ್ತಾರೆಯೋ ಅವರಲ್ಲಿ ಅಂಥ experts ಇರುತ್ತಾರೆ. ಅವರು ಅದನ್ನು ಅರ್ಥ ಮಾಡಿಕೊಳ್ಳುತ್ತಾರೆ. Common manಗೆ ಇದರ ಅರ್ಥ ಬೇಕಾಗಿಲ್ಲ.

ಶ್ರೀ ಎಸ್. ಗೋಪಾಲಗೌಡ.—Common man ಅರ್ಥಮಾಡಿಕೊಳ್ಳಬೇಕೆಂದು ಇಲ್ಲ. "Manufacturer" ಎಂದು ಬೇರೆಯವರಿಗೆ licence ಕೊಟ್ಟರೆ ಸಾಮಾನ್ಯವಾಗಿ . . . .

Sri A. BHEEMAPPA NAIK.—The Hon'ble Minister told you that it is the Central Industrial Workshop or the Government themselves that are going to take it up. So, there is no worry.

ಶ್ರೀ ಎಸ್. ಗೋಪಾಲಗೌಡ.—ಮೊಳಕಾಲ್ಮೂರಿನಿಂದ ಬಂದಿರತಕ್ಕ ಮಾನ್ಯ ಸದಸ್ಯರು ಆ ಪ್ರಾಪಿಷ್ಟ್ ಈ ಬಿಲ್ಲನ್ನಲ್ಲದೆಯೇ ಎನ್ನುವುದನ್ನು ಸ್ವಲ್ಪ ಯೋಚಿಸಲಿ.

ಶ್ರೀ ಎ. ಭೀಮಪ್ಪ ನಾಯಕ್.—ಆ ರೀತಿ provision ಎಲ್ಲ ಬರೀ Act ನಲ್ಲಿ ಬರುವುದಿಲ್ಲ. Rule-making powerನಲ್ಲಿ ಇವೆಲ್ಲವನ್ನೂ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. He has assured us that in the Rule-making power, they are going to make all that.

ಶ್ರೀ ಎಸ್. ಗೋಪಾಲಗೌಡ.—ಮೂಲಭೂತವಾದ ವಿಷಯಗಳಿಗೆ ಸಂಬಂಧಪಟ್ಟ ವಿಷಯವನ್ನು Rule-making ನಲ್ಲಿ ಕೊಟ್ಟರೆ ಕೋರ್ಟಿನಲ್ಲಿ ಅದನ್ನು contest ಮಾಡುವುದಿಲ್ಲವೆ ? It may be held void. ಶ್ರೀಮಾನ್ ಪಟ್ಟಾಭಿರಾಮ್ಮರವರು ಅದರ ಬಗ್ಗೆ authority ಎಂದು ತಿಳಿದುಕೊಂಡಿದ್ದೇನೆ. ಅವರು ಅನುಮಾನ ಪಟ್ಟಿರುತ್ತಾರೆ. I am a layman who is not well versed in legal terminology.

Mr. SPEAKER.—I want to bring to the notice of the Hon'ble Members that at this rate I do not think we will be able to proceed with the Bill. Hon'ble Member on his legs must be allowed to go on with his speech and if any Hon'ble Member wants to give him an effective reply, he can do so when he gets a chance to speak.

ಶ್ರೀ ಎಸ್. ಗೋಪಾಲಗೌಡ.—ನಾನು ಏನು ಹೇಳುತ್ತಾ ಇದ್ದೆ ಎಂದರೆ—manufacturing ಎನ್ನುವುದು ಬಹಳ ಮುಖ್ಯವಾದದ್ದು ಎಂದು ಹೇಳುತ್ತಾ ಇದ್ದೆ. ಇಪ್ಪೇತ್ತು ನಮ್ಮಲ್ಲಿ, ರೂಢಿಯಲ್ಲಿ ಅನೇಕ ವಿಧವಾದ ತೂಕ ಮತ್ತು ಅಳತೆ ಇದೆ. ಅದು ಒಂದು ಅಂಶ. ಇವುಗಳ manufacture ಮಾಡುವುದನ್ನು ಸರ್ಕಾರದವರೇ ಮನಾಪಲು ಮಾಡಿಕೊಳ್ಳಬೇಕು. ಏಕೆಂದರೆ ಇದರಲ್ಲಿರುವಷ್ಟು ಕಷ್ಟ ಸುಖ ಮತ್ತೆಲ್ಲೂ ಇಲ್ಲ. ಅನೇಕ ನ್ಯೂನತೆಗಳು ಇವೆ. ಇದನ್ನು ಉದ್ದೇಶಪೂರ್ವಕವಾಗಿ ಮಾಡುತ್ತಾರೆ ಎಂದಲ್ಲ. 100 ಕೌಂಟ್‌ನ ಒಂದು ಪಂಚೆ ಮಾಡಿಕೊಡಿ ಎಂದು ಹೇಳಿ ಆರ್ಡರ್ ಕೊಟ್ಟರೆ ಅವನು 60 ಕೌಂಟಿನ ನೂಲನ್ನೇ ಉಪಯೋಗಿಸಿ 100 ಕೌಂಟಿನದು ಎಂದು ಹೇಳಿ ಪಂಚೆ ನೇಯ್ದು ಕೊಡುತ್ತಾನೆ. 100 ಕೌಂಟಿನ ನೂಲನ್ನೇ ಹಾಕಿ ನೆಯ್ದು ಮಾಡುವುದಕ್ಕಾಗುವುದಿಲ್ಲ. ಒಪ್ಪಿಕೊಳ್ಳುತ್ತೇನೆ. ಅಂತೂ 60 ಅಲ್ಲದೇ ಇದ್ದರೂ 80-85 ಕೌಂಟಿನ ನೂಲನ್ನು ಹಾಕಿ ಕೊನೆಗೆ 100 ಕೌಂಟಿನದು ಮಾಡಿದ್ದೇನೆ ಎಂದು ಹೇಳುವುದಕ್ಕೆ ಹೋಗುತ್ತಾನೆ. ಹೀಗಾದರೆ ಸರಿಯಾದ ಅಳತೆ ತೂಕಗಳನ್ನು ತಯಾರುಮಾಡುವುದಕ್ಕೆ ಸಾಧ್ಯವಾಗದೇ ಹೋಗಬಹುದು. ಮತ್ತು ಇದರಲ್ಲಿ ಇನ್ನು ಒಂದು ಮೂಲವಾದ ಅಂಶಕೂಡ ಅಡಗಿದೆ. ಗ್ಯಾರಂಟಿ ಆದ ಅಳತೆ ಮತ್ತು ತೂಕ ಯಾವುದು ಎಂಬುದಕ್ಕೆ standardisation ಬಹಳ ಮುಖ್ಯ. Standardisation metal ಆಗಬೇಕು. Standardisation of other ingredients ಆಗಬೇಕು. ಯಾವ ಒಂದು ಸ್ಟ್ಯಾಂಡರ್ಡ್ ಮಾಡುತ್ತೇವೆಯೋ ಅದು ಮಾದರಿಯಾಗಿರಬೇಕು. ಪಿಂಟ್ ಮಾಡುವಾಗ economic principlesಗೆ ಅನುಸಾರವಾಗಿ ಹೇಗೆ ಕೆಲಸ ನಡೆಯುತ್ತದೆಯೋ ಅದೇರೀತಿ ಅಳತೆ ಮತ್ತು ತೂಕಕ್ಕೂ ಕೂಡ ಒಂದು ನಿಯಮಬದ್ಧವಾದ ನೀತಿಗನುಸಾರವಾಗಿ ಕೆಲಸ ನಡೆಯಬೇಕು. ಆ ರೀತಿ ಒಂದು specification ಇಟ್ಟುಕೊಳ್ಳದಿದ್ದರೆ ಎಲ್ಲರೂ ತಮತಮಗೆ

(ಶ್ರೀ ಎಸ್. ಗೋಪಾಲಗೌಡ.)

ಮನಬಂದಂತೆ ತಮ್ಮ ತಮ್ಮ ಗಜಕೋಲನ್ನು ಇಟ್ಟು ಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದು ಬಹಳ ತಪ್ಪು. ಈ ರೀತಿ ಎಷ್ಟು ದಿವಸ ಕಾಲ ಕಳೆಯುವುದಕ್ಕೆ ಆಗುತ್ತದೆ? ಆದ್ದರಿಂದ standard weight ಮತ್ತು standard measure ಇರಲೇಬೇಕು. ಈ ಒಂದು ಸ್ಟ್ಯಾಂಡರ್ಡನ್ನು ಕಲ್ಪಿಸುವುದಕ್ಕೆ ಏನು ಮಾಡಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ವರು ಈ ಅಳತೆ ಮತ್ತು ತೂಕಗಳನ್ನು ತಯಾರು ಮಾಡತಕ್ಕ ಕೆಲಸವನ್ನು ಕೂಡ ಅವರೇ ಇಟ್ಟುಕೊಳ್ಳ ಬೇಕೆಂದು ಹೇಳುತ್ತೇನೆ. ಆ ರೀತಿ ಮಾಡಿದರೆ ಯಾರು ಬೇಕಾದರೂ ಸರ್ಕಾರಿ ಡಿಪೋಪಿನಿಂದ ಇವುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಇವುಗಳಮೇಲೆ ಯಾವವಿಧವಾದ ಆರೋಪಣೆಗಳು ಬರು ವುದಕ್ಕೂ ಅವಕಾಶವಿರುವುದಿಲ್ಲ. ಹಾಗಲ್ಲದೆ ಈ ಕೆಲಸ ವನ್ನು ಮತ್ತೊಬ್ಬರಿಗೆ ವಹಿಸಿದ್ದೇ ಆದರೆ ಅದು ಸುನೂ ತ್ರವಾಗಿ ನಡೆಯುವುದಿಲ್ಲ. ಎರಡನೆಯ ಅಂಶ, ಇವು ಗಳನ್ನು ಉಪಯೋಗ ಮಾಡುವುದು. ಇದರಲ್ಲಿಂತೂ ಅನೇಕ ತೊಡಕುಗಳಿವೆ. ನಾನು ಕಂಡಹಾಗೆ ಹೇಳು ವುದಾದರೆ ಈ 'ರೂಢಿರಾಕ್ಷಸ' ಅನ್ನುವುದು ಬಹಳ ಕೆಲಸ ಮಾಡುತ್ತದೆ. ಈ traditions, customs ಎಂಬುದಾಗಿ ಯಾವ ರೂಢಿಗಳು ಮಾಮೂಲಾಗಿ ಬರು ತ್ತಿವೆಯೋ ಅವು ಎಷ್ಟೇ ಕಾನೂನುಗಳನ್ನು ಮಾಡಲಿ ಹೋಗುವುದಿಲ್ಲ. ಈ ಮಾಮೂಲುಗಳನ್ನು ತಡೆಗಟ್ಟ ಬೇಕಾದರೆ ಜನತೆಗೆ ಸಾಕಾದಷ್ಟು ಎಚ್ಚರಿಕೆ ಬರ ಬೇಕು. ಈ ಮಾಮೂಲುಗಳಿಂದ ತೊಂದರೆಯೇ ಹೊರತು ಅನುಕೂಲವಿಲ್ಲ ಎಂಬುದನ್ನು ಅವರೇ ತಿಳಿದು ಕೊಳ್ಳಬೇಕು. ಇದು ಎಲ್ಲಾ ಕ್ಷೇತ್ರಗಳಲ್ಲೂ ಇದೆ. ಬರೀ ಬಾಯಿಮಾತಿಗೆ ಹೋಗತಕ್ಕದ್ದಲ್ಲ. ನಮಾಜ ದಲ್ಲಿ, ರಾಜಕೀಯ ಕ್ಷೇತ್ರದಲ್ಲಿ precedent ಎಂದು ಏನು ಹೇಳುತ್ತೇವೆಯೋ ಹಾಗೆ ಈ precedent ಇದ್ದೇ ಇರತಕ್ಕದ್ದಾಗಿದೆ. ಆದರೆ ಇದು ಒಂದು ಒಳ್ಳೆಯ precedent ಅಲ್ಲ. ಸರ್ಕಾರದವರೇ ಈ ಕೆಲಸವನ್ನು ಕೈಕೊಂಡಿದ್ದಾರೆ, ಇದಕ್ಕೆ ಒಂದು ಕಾನೂನು ಕಾಯಿದೆ ಇದೆ ಎನ್ನುವುದು ಜನತೆಯ ಗಮನಕ್ಕೇ ಬರುವುದಿಲ್ಲ. ಒಂದು ನಣ್ಣ ಉದಾಹರಣೆ ಹೇಳುವು ದಾದರೆ ಈಗ ತಾವು ಗೇಣಿ ಕಾನೂನು ಮಾಡಿದ್ದೀರಿ, ಅದರಲ್ಲಿ ಐದು ವರ್ಷದ ಗೇಣಿ ಕರಾರನ್ನು ಬರೆಸ ಬೇಕೆಂದು ಸ್ಪಷ್ಟವಾಗಿ ಇದೆ. ಆದರೂ ಒಂದು ವರ್ಷದ ಕರಾರನ್ನೇ ಬರೆಸುತ್ತಾರೆಯೇ ಹೊರತು ಐದು ವರ್ಷದ ಕರಾರು ಬರೆಸುವುದಿಲ್ಲ ಒಟ್ಟಿನಲ್ಲಿ ರೂಢಿಯಲ್ಲಿ ಹೇಗೆ ಇದೆಯೋ ಅದೇ ರೀತಿ ಮಾಡು ತ್ತಾರೆ. ಇದರಲ್ಲಿ ಎಂಟನೇ ಪ್ರೊವಿಜ್ ಏನಿದೆ, ಇದನ್ನು ತಂದಿರುವುದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಇದು ಬಹಳ ಅಗತ್ಯವಾಗಿದೆ. ಏಕೆಂದರೆ ಎರಡು ಲಕ್ಷ ಜನರನ್ನು ನಾವು ಇದರಿಂದ ಒಂದು ತಹಬಂದಿಗೆ ತರ ಬಹುದು. ಇದನ್ನು ಕಡ್ಡಾಯವಾಗಿ ಜಾರಿಗೆ ತರ ಬೇಕು. ಬರೀ ಕಾನೂನು ಮಾಡುವುದರಿಂದ ಸ್ಟ್ಯಾಚ್ಯೂಟ್‌ನಲ್ಲಿ ಸೇರಿಸುವುದರಿಂದ ಹೆಚ್ಚು ಉಪ ಯೋಗವಾಗುವುದಿಲ್ಲ, ಎಲ್ಲೆಲ್ಲಿ ಇದಕ್ಕೆ ವಿರೋಧವಾಗಿ ನಡೆಯುತ್ತಾ ಇದೆ ಅಂಥಾದ್ದನ್ನು ಪತ್ತೆಹಚ್ಚಿ ಕ್ರಮ ಜರುಗಿಸಬೇಕೆಂದು ಕಡ್ಡಾಯವಾಗಿ ಹೇಳುತ್ತೇವೆ. ಆದ್ದರಿಂದ ತೂಕ ಮತ್ತು ಅಳತೆ ಬಟ್ಟುಗಳನ್ನು ಸಂಪೂರ್ಣವಾಗಿ ಸರ್ಕಾರದ ವಶದಲ್ಲಿಟ್ಟುಕೊಳ್ಳ ತಕ್ಕದ್ದು ಎಂದು ಸಲಹೆ ಮಾಡುತ್ತೇನೆ. ಮತ್ತು ಯಾವ ಅಳತೆ ಮತ್ತು ತೂಕವನ್ನು ಸರ್ಕಾರದವರು ಸರಿಯಾದದ್ದು ಎಂದು ಹೇಳಿ ತೀರ್ಮಾನ ಮಾಡುತ್ತಾ ರೆಯೋ ಅದಲ್ಲದೆ ಬೇರೆ ರೀತಿಯ ಅಳತೆ ಮತ್ತು ತೂಕದ ಬಟ್ಟುಗಳನ್ನು ಉಪಯೋಗಿಸುತ್ತಾ ಇದ್ದಲ್ಲಿ ಅದನ್ನು ಕ್ರಮವಾಗಿ ಬಳಕೆಯಿಂದ ತೊಡೆದು ಹಾಕ ಬೇಕಾಗುತ್ತದೆ. ಒಂದೇಸಾರಿ, ಇವತ್ತೇ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಈಗಿರತಕ್ಕ ಅಳತೆ ಮತ್ತು ತೂಕದ ಬಟ್ಟುಗಳೆಲ್ಲಾ ಇನ್ನುಮುಂದೆ ನಲು ವಳಿಗೆ ಬರುವುದಿಲ್ಲ ಎಂದು ಹೇಳಿದ್ದೇ ಆದರೆ ನಾವು ಅವರಿಗೆಲ್ಲಾ ಸರಿಯಾದ ತೂಕ ಮತ್ತು ಅಳತೆಯ ಬಟ್ಟುಗಳನ್ನು ಒದಗಿಸುವ ಮಟ್ಟದಲ್ಲಿ ಇರಬೇಕಾಗು ತ್ತದೆ.

Part III, 15ನೇ ಸೆಕ್ಷನ್ (2)ರ ಬಗ್ಗೆ ಹೆಚ್ಚು ಚರ್ಚೆಯಾಗಿದೆ. ಬಹುತಃ ಈಗ ಉಪಯೋಗಿಸುತ್ತಾ ಇರತಕ್ಕ weights and measures ಸರಿಯಾಗಿ ದೆಯೇ ಇಲ್ಲವೇ, ಎಂದರೆ ಈಗ specify ಮಾಡಿರತಕ್ಕ ರೀತಿಯಲ್ಲಿ ಇದೆ ಎಂದು ಕಂಡುಬಂದರೆ ಸರಿಯಾಗಿದೆ ಎಂದು ಲೈಸೆನ್ಸ್ ಕೊಡುವುದಕ್ಕೆ ಅವಕಾಶ ಇದೆ ಎನ್ನುವ ಅರ್ಥದಲ್ಲಿ ಆ ಪದಗಳನ್ನು ಉಪಯೋಗಿಸಿದ ಹಾಗೆ ಇದೆ. ಈಗ ಯಾವುದೋ ಒಂದು ಅಂಗಡಿ ಯಲ್ಲಿ ಒಂದು ಬಟ್ಟು ಇರುತ್ತದೆ. ಅದು specification ಗೆ ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ಇನ್ಸ್‌ಪೆಕ್ಟರು ನೋಡಬೇಕು ಎಂಬ ಅರ್ಥದಲ್ಲಿ ಹೇಳಿ ದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಕೆಲವು ಮಾನ್ಯ ಸದಸ್ಯರು ಹೇಳಿರುವಹಾಗೆ ಈ ಅರ್ಥ ಇಲ್ಲರುವಹಾಗೆ ಬರುವುದಿಲ್ಲ. ಅವರು ಏನು ಉಪಯೋಗಿಸುತ್ತಾ ಇದ್ದಾರೆ ಆ ಕಲ್ಲುಗಳು ಸರಿಯಾಗಿವೆ ಎಂದು ಸ್ಟ್ಯಾಂಪ್ ಒತ್ತಿದರೆ ಆಯಿತು. ಕೊಳಗ, ಗಜಕಡ್ಡಿ ಯಾವುದು ಉಪಯೋಗಿಸುತ್ತಾ ಇದ್ದಾರೊ ಅದನ್ನು ನೋಡಿದ್ದೆ, ಸರಿಯಾಗಿದೆ, ನೋಡಿದ್ದೆ ಸರಿಯಾಗಿದೆ ಎಂದು ಇನ್ಸ್‌ಪೆ ಕ್ಟರು ಯಾವುದೋ ಒಂದು ಪ್ರಭಾವಕ್ಕೊಳಗಾಗಿ ಸ್ಟ್ಯಾಂಪ್ ಒತ್ತಿದರೆ ಗತಿ ಏನು? ಶ್ರೀವಾ ರಾಮು ಯ್ಯನವರು ಹೇಳಿರುವಹಾಗೆ ಅವನು omnipotent inspector ಆದರೆ ಯಾವುದಕ್ಕೂ ಹೆದರುವುದಿಲ್ಲ. ನಿರ್ದಾಕ್ಷಿಣ್ಯವಾಗಿ ವರ್ತಿಸುತ್ತಾನೆ. ಕೆಲವುಕಡೆ impo-tent inspectors ಇರುತ್ತಾರೆ. ನಾನು ನೋಡಿ ದ್ದೇನೆ. ಶಿವಮೊಗ್ಗ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಅಡಿಕೆ ತೂಕ ಹಾಕುವಾಗ ಒಬ್ಬನನ್ನು ಮಾರ್ಕ್ ಮಾಡುವುದಕ್ಕೆ ಅವನು ಬಹಳ omnipotent ಎಂದು ಬಿಟ್ಟರು, ಅವನು ಅಲ್ಲಿಗೆ ಹೋದ ತಕ್ಷಣ impotent ಆಗಿಬಿಟ್ಟ. ಅವನ ಕೈಯಲ್ಲಿ ಒಂದು ಪುಸ್ತಕ ಕೊಟ್ಟಿ ದ್ದರು. ಅವನು ಏನಿದ್ದರೂ ಸಣ್ಣ ಮನುಷ್ಯ. ಗೆಜೆ ಟೆಡ್ ಆಫೀಸರೂ ಅಲ್ಲ. ಸಣ್ಣ ನೌಕರ. ಅದೇ ರೀತಿ ಈ ಇನ್ಸ್‌ಪೆಕ್ಟರೂ ಕೂಡ ಒಬ್ಬ ಸಣ್ಣ ನೌಕರ, 100 ರೂಪಾಯಿನ ಗ್ರೇಡ್ ಇರಬಹುದು. ಈ ವ್ಯಾಪಾ ರಸ್ಥರ ಮತ್ತು ಜನರ ಒಂದು ಅಭಿಪ್ರಾಯ ಆಯಾಯ ನೌಕರರ ಗ್ರೇಡಿನ ಮೇಲೆ ಹೋಗುತ್ತದೆ. ಈ ಇನ್ಸ್‌ಪೆ ಕ್ಟರುಗಳ ಗ್ರೇಡ್ ಎಷ್ಟು, ಸ್ವಾಮಿ?

ಶ್ರೀ ಎಚ್. ಸಿದ್ದವೀರಪ್ಪ.—ಫೈನಾನ್ಷಿಯಲ್ ಮೆಮೊರ್ಯಾಂಡಂ ಓದಿದೆ. ಬಹುತಃ ತಾವು ಇರಲಿಲ್ಲ ಎಂದು ಕಾಣುತ್ತದೆ.

Inspectors : two cadres :—

Senior Inspectors Rs. 70-5-90-6-120-10-200.

Inspectors Rs. 40-2½-50-5-100.

ಶ್ರೀ ಎಸ್. ಗೋಪಾಲಗೌಡ.—ಆ 40 ರೂಪಾಯಿ ನವರ ವಿಷಯವೇ ನಾನು ಹೇಳುತ್ತಾ ಇದ್ದೆ. 50 ರೂಪಾಯಿನಿಂದಲಾದರೂ start ಮಾಡಬಹುದಾ

ಗಿತ್ತು. 10 ರೂಪಾಯಿ ಕಮ್ಮಿ ಮಾಡಬೇಕಾದ ಅಗತ್ಯ ಇರಲಿಲ್ಲ, ಅದು ಬೇರೆವಿಷಯವಾಗುತ್ತದೆ. ನಾನು ಏನು ಹೇಳುತ್ತಾ ಇದ್ದೆ ಎಂದರೆ ಆ ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಹೋದ omnipotent ಎನ್ನಿಸಿಕೊಂಡ ಮನುಷ್ಯ impotent ಆಗಿಹೋದ (ನಗು!). Impotent in the sense that he has been invested with so many powers but in practice he was impotent. ಅಲ್ಲಿ ಹೋಗಿ ಕೆಲಸ ಮಾಡಬೇಕಾದರೆ ಆ ಸನ್ನಿವೇಶ ಹೇಗೆ ಇರುತ್ತದೆ ಎಂಬುದನ್ನು ನಾವು ಸ್ವಲ್ಪ ಯೋಚನೆ ಮಾಡೋಣ. ಆ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಒಳ್ಳೆ ದೊಡ್ಡ ದೊಡ್ಡ ಮಂಡಿ ವರ್ತಕರು ಸಾವಿರಾರು ರೂಪಾಯಿ ವ್ಯಾಪಾರಮಾಡತಕ್ಕವರು ಬರುತ್ತಾರೆ. ಅವರ ಮುಂದೆ ಈ ಸಣ್ಣ ನೌಕರ ಹೋಗಿ ಹೆಚ್ಚಿಗೆ ಏನೂ ತನ್ನ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. He cannot wag his tail, ಆ ದೃಷ್ಟಿಯಿಂದ ನಾನು ಹೇಳುತ್ತಾ ಇದ್ದೇನೆ. ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿಕೊಂಡು ವ್ಯಾಪಾರ ಮಾಡತಕ್ಕ ವ್ಯಾಪಾರಸ್ಥರು ಬಳ್ಳಾರಿ, ವೆಲ್ಲೂರು ಮುಂತಾದ ಕಡೆಗಳಿಂದ ಬರುತ್ತಾರೆ, ದೊಡ್ಡ ದೊಡ್ಡ ಮನುಷ್ಯರು ಅಡಿಕೆ ತಂದು ಹಾಕುತ್ತಾರೆ. ಅವರ ಮಧ್ಯೆ ಈ 40 ರೂಪಾಯಿ ತೆಗೆದು ಕೊಳ್ಳತಕ್ಕ ಮನುಷ್ಯ ಬಂದು, ಎಲ್ಲ, ತೂಕ ತೆಗೆಯಿರಿ ಎಷ್ಟು ಅಳೆದಿದ್ದೀರಿ, ತೂಕ ಸರಿಯಾಗಿದೆಯೇ ಇಲ್ಲವೇ ನೋಡೋಣ ಎಂದರೆ ಅದು ಹಾಸ್ಯಾಸ್ಪದವಾಗುತ್ತದೆ. ಸಾಧಾರಣವಾಗಿ ಈ ಅಡಿಕೆ ದರಗಳನ್ನು ಕೋಟ್ ಮಾಡುವಾಗ ಕೆಂಪು ಶಾಲನ ಅಡಿಯಲ್ಲಿ ಕೋಟ್ ಮಾಡುತ್ತಾರೆ. ಅಷ್ಟು ದಕ್ಷರಿದ್ದಾರೆ, ಯಾರಿಗೂ ಗೊತ್ತೇ ಆಗುವುದಿಲ್ಲ. ಹತ್ತು ಜನ ಗಿರಾಕಿಗಳು ಕುಳಿತಿರುತ್ತಾರೆ, ಒಬ್ಬರ ಟರ್ಮ್ ಇನ್ನೊಬ್ಬರಿಗೆ ಗೊತ್ತಾಗುವುದಿಲ್ಲ. ಬಹಿರಂಗವಾಗಿ ನಡೆಯುವುದಿಲ್ಲ. ಬಹಿರಂಗವಾಗಿ ಹರಾಜು ಹಾಕಬೇಕು ಎಂದು ಹೇಳಿ ಈ ಕಾಫೀ ಬೋರ್ಡ್‌ನವರು ಕಾಫೀ ಬೀಜಕ್ಕೆ ಅನ್ವಯ ಮಾಡಿದ್ದಾರೆ. ಆದರೆ ಇಲ್ಲಿ ಅದು practiceನಲ್ಲಿ ಇಲ್ಲ. ಎಲ್ಲವೂ ಬಹಳ ಗುಟ್ಟಾಗಿ ನಡೆಯುತ್ತದೆ, ಒಬ್ಬರು ಹೇಳುವುದು ಇನ್ನೊಬ್ಬರಿಗೆ ಗೊತ್ತಾಗುವುದಿಲ್ಲ, ಶಾಲು ಮುಚ್ಚಿ ಬರೆಯುತ್ತಾನೆ.

Sri H. SIDDAVEERAPPA.—These things are effectively controlled by regulated markets.

Mr. SPEAKER.—We are concerned with the weights and measures on the present occasion.

Sri S. GOPALA GOWDA.—Certainly, Sir, I am only quoting what is happening in Shimoga Areca Trade.

12 NOON.

ಶಿವಮೊಗ್ಗಾ ಅಡಿಕೆ ಮಾರಾಟದಲ್ಲಿ ಪ್ರಗತಿಯಾದ ಕೇಂದ್ರ. ಅಲ್ಲಿ ಅದು ಎಷ್ಟು ಮಾರಾಟವಾಗುತ್ತಿದೆಯೆಂಬುದು ಎಲ್ಲರಿಗೂ ಗೊತ್ತು. I am not going to condemn the measures used there. ಅಕ್ರಮವಿರುವುದನ್ನು ನಿರಪಡಿಸುವುದು ಒಳ್ಳೆಯದು. ತೂಕದ ವಿಷಯದಲ್ಲಿ ಒಂದೊಂದು ಮಂಡಿಯವರು ಒಂದೊಂದು ತರಹ ಗುಂಡುಗಳನ್ನು ಉಪಯೋಗಿಸುತ್ತಾರೆ. ಅಳತೆ ಮಾಡುವವನು 30 ವರ್ಷಗಳಿಂದ ನಿಷ್ಣಾತನಾಗಿರುತ್ತಾನೆ. 5 ಮಣದ ಮೂಟೆಗಳನ್ನು ಒಂದು ಸಾವಿರ ಲಾರಿಯಲ್ಲಿ ಮುಚ್ಚಿ ಕೊಂಡು ಹೋಗಿ ಬೇಕಾದ ಕಡೆಗೆ ತಲುಪಿಸುತ್ತಾರೆ. ಆ ಮೂಟೆ ಬಿಚ್ಚಿನೋಡಿದರೆ 4 ಮಣ $2\frac{1}{2}$ ದಡಿಯದ ಮೇಲೆ ಯಾವುದರಲ್ಲೂ ಇರುವುದಿಲ್ಲ. ಹೀಗೆ ಮಾಡುವುದರಿಂದ ರೈತರಿಗೆ ಬಹಳವಾಗಿ ತೂಕದಲ್ಲಿ ಹೊಡೆತ ಬೀಳುತ್ತದೆ. 5,000 ಚೀಲದಿಂದ 5,000 ಧಡಿಯು ಹೋಗುತ್ತದೆ. ಈ ರೀತಿ ನಷ್ಟವಾಗುತ್ತಿದೆ. ಇಂಥಾ ಸಂದರ್ಭಗಳಲ್ಲಿ ಬೆಳೆಯುವ ರೈತನಿಗೆ ಅನುಕೂಲ ದೊರೆಯುತ್ತಿಲ್ಲ. ಸ್ಕ್ವಾಂಡರ್ಡ್ ವೆಯಿಟ್ಸ್ ಇಲ್ಲ. ಇನ್ಸ್‌ಪೆಕ್ಟರುಗಳು ಯಾವ ರೀತಿ ಬಳಕೆಯಲ್ಲಿರುವ ಅಳತೆ ಮತ್ತು ತೂಕ ಮಾಡುವ ಸಾಧನಗಳನ್ನು ತನಿಖೆ ಮಾಡಿ ಅಕ್ರಮವಾದುದನ್ನು ತಡೆಗಟ್ಟಿ ಸರಿಯಾದುದನ್ನು ಬಳಕೆಗೆ ತರುವಂತೆ ಮಾಡಿ ಕಂಟ್ರೋಲ್ ಮಾಡುವುದಕ್ಕೆ ಏನುಮಾಡಬೇಕೆಂಬುದೇ ಈಗ ಮುಖ್ಯವಾಗಿರುವ ಸಮಸ್ಯೆ. ದೊಡ್ಡ ವ್ಯಾಪಾರಗಳಿರುವ ಕಡೆ ಅಧಿಕಾರ ಕೊಟ್ಟರೂ ಕೂಡ ಅದನ್ನು ಚಲಾಯಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. The officer becomes so helpless. ಸರ್ಕಾರಿ ಅಧಿಕಾರಿಗಳು ಪ್ರತಿದಿನ ಓಡಾಡಿ ಕಾಫಿ ಕುಡಿದು ಹಮಾಲಯ ರೂಪದಲ್ಲಿ ಕೆಲಸ ಮಾಡಿಕೊಂಡು ಹೋಗುತ್ತಾರೆ. ನಾನು ನೋಡಿರುವ ಹಾಗೆ ಶಿವಮೊಗ್ಗಾದಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ದಿವಸ ಪುಸ್ತಕದಲ್ಲಿ ಪೆಡ್ಡೂರ್ ಬರೆದು ಡಿಸ್ಟಿಲ್ಡ್ ವಾಟರ್, ಗ್ಯಾಮಿಟ್- ಹೀಗಿರಬೇಕು ಎಂದು 1/1000 ಭಾಗ ಕೂಡ ಹಾಕಿದ್ದೀರಿ. ಆದರೆ ಪ್ರಾಕ್ಟಿಕಲ್ ಆಗಿ ಮಾಡುವುದು ಕಷ್ಟ. ಈಗ ಲಕ್ಷಾಂತರ ಜನರು ವ್ಯಾಪಾರದಲ್ಲಿ ತೊಡಗಿದ್ದಾರೆ. ಅವರಲ್ಲಿ ನಾವು ಪದಾರ್ಥಗಳನ್ನು ಕೊಂಡುಕೊಳ್ಳಬೇಕು ಮತ್ತು ಮಾರಬೇಕು, ಅಂಥಾ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಈಗ ಬಳಕೆಯಲ್ಲಿರುವ ತೂಕದ ಬಟ್ಟುಗಳು ಮತ್ತು ಅಳತೆಯ ಸೇರು, ಕೊಳಗ ಇತ್ಯಾದಿಗಳನ್ನು ತೆಗೆದು ಹೊಸ ತೂಕದ ಬಟ್ಟು ಮತ್ತು ಅಳತೆಯ ಸೇರು ಇತ್ಯಾದಿಗಳನ್ನು ಬಳಸುವ ಹಾಗೆ ಮಾಡುವ ಬಗೆಹೇಗೆ? ಯಾರಿಗೆ ಈ ಅಧಿಕಾರ ಕೊಡಬೇಕು ಎಂಬುದು ಬಹಳ ಮುಖ್ಯವಾದ ಅಂಶವೆಂದು ನಾನೂ ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಇನ್ಸ್‌ಪೆಕ್ಟರುಗಳಿಗೆ ಅಧಿಕಾರವನ್ನು ಕೊಟ್ಟರೆ ಕಾರ್ಯತಃ ನಡೆಸುವಾಗ ಕಷ್ಟವಾಗಬಹುದು. ಅನೇಕ ವ್ಯಾಪಾರಿಗಳಿಗೆ ಸರಿಯಾದ ತಿಳಿವಳಿಕೆ ಕೊಡದಿದ್ದರೆ ತೊಂದರೆಯಾಗಬಹುದು. ಈ ದಿವಸ ಸೇಲ್ಸ್‌ಟ್ಯಾಕ್ಸ್ ರೆಪ್ಪು ಕೇಳುತ್ತಾರೆ. ಬಹಳ ಮಂದಿ ವ್ಯಾಪಾರಿಗಳು ಅಧಿಕಾರಿಗಳ ಹಿಡಿತದಲ್ಲಿದ್ದಾರೆ. ರೆಪ್ಪುಗಳು ಬೇಕಾದ ಪ್ರಸಂಗವಿದೆ. ಕೆಲವರು ಸರ್ಕಾರದ ಮುಖಾಂತರ ನಿಯಮಿಸಲ್ಪಟ್ಟಿದ್ದಾರೆ. ಅವರು ಸರಿಯಾದ ತೂಕ ಮತ್ತು ಅಳತೆಯ ಸಾಧನಗಳನ್ನು ಉಪಯೋಗಿಸಲು ಅಡ್ಡಿ ಮಾಡಲಾರರು. ಸರ್ಕಾರದವರು ಸರಿಯಾದ ತೂಕದ ಮತ್ತು ಅಳತೆಯ ಸಾಧನಗಳನ್ನು ಒದಗಿಸುವುದಾದರೆ ನಮ್ಮಲ್ಲರುವುದನ್ನೇ ಉಪಯೋಗಿಸುತ್ತೇವೆಂದು ಯಾರೂ ಹೇಳಲಾರರು. ತಮ್ಮಲ್ಲರುವುದನ್ನೇ ಉಪಯೋಗಿಸುವುದಾಗಿ ಮೆಮೋರ್ಯಾಂಡಂ ಕೊಡುವ ಪರಿಸ್ಥಿತಿ ಇಲ್ಲ. ಸರಿಯಾದ್ದು ಸಿಕ್ಕಿದರೆ ಉಪಯೋಗಿಸಲು ಅಭ್ಯಂತರವಿಲ್ಲ. ಸರಿಯಾದ್ದು ಸಿಕ್ಕದಿರುವುದರಿಂದ ಸ್ಪೆಸಿಫೈ ಮಾಡಿರುವುದನ್ನು ಒದಗಿಸದಿದ್ದರೆ ವ್ಯಾಪಾರಿಗಳು ತಾವು ಉಪಯೋಗಿಸುತ್ತಿರುವುದನ್ನೇ ಉಪಯೋಗಿಸುವುದರಿಂದ ಕಷ್ಟವಾಗುತ್ತದೆ. ಆಗ ವ್ಯಾಪಾರಿಗಳು ತಮ್ಮಲ್ಲರುವುದನ್ನು ಉಪಯೋಗಿಸದಿರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಒತ್ತಾಯ ಮಾಡಿದರೆ ಘರ್ಷಣೆ ಬರುತ್ತದೆ. ಆಗ ವ್ಯಾಪಾರಸ್ಥರಲ್ಲರುವ ಕಲ್ಲಿಗೆ ಸ್ಟಾಂಪ್ ಒತ್ತ

(ಶ್ರೀ ಎಸ್. ಗೋಪಾಲಗೌಡ.)

ಬೇಕಾದ ಪರಿಸ್ಥಿತಿ ಬರುತ್ತದೆ. ಹೊಸದಾಗಿ ಏನೂ ಉತ್ತಮಪಡಿಸಿದ ಹಾಗಾಗುವುದಿಲ್ಲ. ಒಂದು ವೇಳೆ ಏನಾಗಬಹುದೆಂದರೆ ಮಂತ್ರಿಗಳಿಗೆ ಕಾನೂನು ಮಾಡಿದವರಿಗೆ ಆಸಕ್ತಿ ಇರುತ್ತದೆ. ಅವರು ಕಾನೂನು ಎಷ್ಟು ಮಟ್ಟಿಗೆ ಜಾರಿಯಾಗಿದೆಯೆಂಬುದನ್ನು ನೋಡಲು 20 ಇನ್‌ಸ್ಪೆಕ್ಟರುಗಳನ್ನು ನೇಮಕಮಾಡುತ್ತಾರೆ. ಆ ಇನ್‌ಸ್ಪೆಕ್ಟರುಗಳು ತಮ್ಮ ಕ್ಷೇತ್ರದಲ್ಲಿ ತೂಕ ಮತ್ತು ಅಳತೆಯ ಸಾಧನಗಳನ್ನು ಚಕ್ಕು ಮಾಡಿ ತಿಳಿಸಬೇಕಾಗುತ್ತದೆ. ಅವರು ಕೇಸುಗಳನ್ನು ದಾಖಲು ಮಾಡದಿದ್ದರೆ ನರಿಯಾಗಿ ತನಿಖೆ ಮಾಡಿಲ್ಲವೆಂದು ಸಂಬಳ ಹಿಡಿಯುತ್ತಾರೆ. ಆ ಭಯದಿಂದ ಇನ್‌ಸ್ಪೆಕ್ಟರು ಅಂಗಡಿಗಳಿಗೆ ಹೋಗಿ ಈ ತಿಂಗಳು ಎರಡು ಮುಂದಿನ ತಿಂಗಳು ಮೂರು ಆ ಮೇಲೆ ನಾಲಕ್ಕು ಹೀಗೆ ಕೇಸುಗಳನ್ನು ಕೊಡುತ್ತಾ ಇರುತ್ತಾರೆ. ಈ ಕಾನೂನನ್ನು ಪಾಸು ಮಾಡಿ ಸ್ಟ್ಯಾಂಪ್ ಒತ್ತಬೇಕೆಂದು ಹೇಳಿದರೆ ಕಾರ್ಯತಃ ಪರಿಣಾಮಕಾರಿಯಾದ ಅನುಕೂಲ ದೊರೆಯಲಾರದು. ಈ ಸಂದರ್ಭದಲ್ಲಿ ಒಂದು ಸಣ್ಣ ಕತೆ ಹೇಳುತ್ತೇನೆ. ಯಾರೋ ಒಬ್ಬನನ್ನು ಹೋಗಿ ಒಂದು ಕಡೆ ಕೂತು ಬಂದು ಹೋಗುವ ಗಾಡಿಗಳಿಗೆ ಸ್ಟ್ಯಾಂಪು ಹಾಕು ಎಂದು ನಿಯಮಿಸಿದರು. ಅವನಿಗೆ ಸಂಬಳವಿರಲಿಲ್ಲ. ಅವನು ಎರಡಾಣೆ ತೆಗೆದುಕೊಳ್ಳದೆ ಯಾವುದಕ್ಕೂ ಸ್ಟ್ಯಾಂಪು ಹಾಕುತ್ತಿರಲಿಲ್ಲ. ಸ್ಟ್ಯಾಂಪು ಹಾಕದಿರುವುದು ಜನರ ದೃಷ್ಟಿಯಲ್ಲಿ ಇಲ್ಲೀಗಲ್ ಎಂಬ ಭಾವನೆ ಬಂದಿತು. ಆಮೇಲೆ ಎಲ್ಲರೂ ಅವನ ಹತ್ತಿರಕ್ಕೆ ಹೋಗಿ ಎರಡಾಣೆ ಕೊಟ್ಟು ಸ್ಟ್ಯಾಂಪು ಹಾಕಿಸಿಕೊಂಡು ಹೋಗುತ್ತಿದ್ದರು. ನರಿಯಾದ ವ್ಯವಸ್ಥೆ ಮಾಡದಿದ್ದರೆ ಈ ರೀತಿಯಾಗುತ್ತದೆ. ಬರೀ ಒಂದು ಸ್ಟ್ಯಾಂಪು ಹಾಕುವ ಅಧಿಕಾರ ಕೊಟ್ಟಿದ್ದರಿಂದ ಅವನು ಹಾಕಿ ನರ್ವಿಫೈಮಾಡಲೇಬೇಕು ಎಂದು ಭಾವನೆ ಬಂತು. ಒಂದು ವೇಳೆ ವ್ಯಾಪಾರಸ್ಥರ ಹತ್ತಿರ ಸ್ಪೆಸಿಫೈಡ್ ವೆಯಿಟ್ಸ್ ಇದ್ದರೂ ಅಧಿಕಾರಿಯು ತನ್ನ ಅಧಿಕಾರವನ್ನು ಉಪಯೋಗಿಸಬೇಕೆಂದು ಮನಸ್ಸು ಮಾಡಿದಾಗ ಅದು ಕಬ್ಬಿಣದ ಹಾಗೆ ಕಾಣುವುದಿಲ್ಲ. ಎಲ್ಲಿಂದ ತೆಗೆದುಕೊಂಡು ಬಂದಿರಿ ಎಂದು ಕೇಳಬಹುದು. ಆಗ ಕಷ್ಟವಾಗುತ್ತದೆ. ಉಪಯೋಗಿಸುತ್ತಿರುವುದು ನರಿಯಲ್ಲವೆಂದು ಹೇಳಿದರೆ ಪೀನಲ್ ಸೆಕ್ಷನ್ ಪ್ರಕಾರ 500 ರೂಪಾಯಿ ದಂಡ ಕೊಡಬೇಕಾಗುತ್ತದೆ. ಐದು ರೂಪಾಯಿ ವ್ಯಾಪಾರ ಮಾಡುವವನೂ ಕೂಡ ನಿಗದಿಯಾದ ಅಳತೆ ಮತ್ತು ತೂಕದ ಸಾಧನಗಳನ್ನು ಇಟ್ಟುಕೊಳ್ಳಲೇಬೇಕಾಗುತ್ತದೆ. ಹತ್ತು ರೂಪಾಯಿ ಬಂಡವಾಳ ಹಾಕಿ ವ್ಯಾಪಾರ ಮಾಡುವವನೂ ಸಹ ತಕ್ಕಡಿ ಸೇರು ಇಟ್ಟುಕೊಳ್ಳಲೇಬೇಕು. ಇನ್‌ಸ್ಪೆಕ್ಟರು ಅವನಲ್ಲಿಗೆ ಹೋಗಿ ನಿನ್ನ ಸೇರನ್ನು ಎಲ್ಲಿಂದ ತಂದೆ, ಇದು ನರಿಯಾಗಿಲ್ಲ ಎಂದು ಹೇಳಿದರೆ 500 ರೂಪಾಯಿ ದಂಡ ಆ ಸಣ್ಣ ವ್ಯಾಪಾರಸ್ಥ ಕೊಡಬೇಕೆಂದರೆ ಹೇಗೆ ತಾನೆ ಸಾಧ್ಯವಾದೀತು? ಯಾರೂ ಮನಃಪೂರ್ತಿಯಾಗಿ ಪೋಸಮಾಡಬೇಕೆಂದು ಮಾಡುವುದಿಲ್ಲ. ಯಾರ ಹತ್ತಿರವೋ ತಂದು ಮಾರಾಟ ಮಾಡುತ್ತಿರುತ್ತಾರೆ. ಇಂಥಾ ಸಂದರ್ಭಗಳು ಬಹಳವಾಗಿವೆ. ಈ ಕಾನೂನು ಬಹಳ ಹಿಂದಿನಿಂದ ಇದ್ದರೂ ನಮ್ಮ ಗಮನಕ್ಕೆ ಅನೇಕ ವಿಷಯಗಳು ಬಂದೇ ಇರಲಿಲ್ಲ. ಈ ದಿವಸ ಈ ವಿಷಯ ನಮ್ಮ ಮುಂದೆ ಬಂದಿರುವುದರಿಂದ ಪೂರ್ವಾಪರ ಯೋಚನೆ ಮಾಡಿ ಇದರಲ್ಲಿರುವ ಕ್ಲಾಜುಗಳ ಪ್ರಕಾರ ಕಾರ್ಯತಃ ಸಾಧಿಸಲು ಅವಕಾಶವಿದೆಯೇ ಎಂಬುದನ್ನು ಮುಖ್ಯವಾಗಿ ಪರಿಶೀಲಿಸಬೇಕಾಗಿದೆ. ಬಲ್ಲು ಬೇಕಾದಷ್ಟು ಮಾಡಬಹುದು, ಅದು ಮುಖ್ಯವಲ್ಲ. Statement of Objects and Reasonsನಲ್ಲಿ ಹೀಗೆ ಹೇಳಿದ್ದಾರೆ:—"Representations were made by the people and in the Legislature from time to time about the difficulties experienced by the use of false weights and measures in several parts of the State." ಈ ಮಸೂದೆಯನ್ನು ಮಾನ್ಯ ಸಭೆಯ ಮುಂದೆ ಮಂಡಿಸುವುದಕ್ಕೆ ಇದು ಬಹಳ ಮುಖ್ಯವಾದ ಒಂದು ಕಾರಣ. ಶ್ರೀನಿವಾಸಯ್ಯಂಗಾರ್‌ರವರು ತಮ್ಮ ಕಡೆ ಯಾವ ಕೊಳಗವಿದೆ ಎಂದು ಹೇಳಿದರು. ನನಗೆ ತಿಳಿದ ಹಾಗೆ ಅಡಿಕೆ ವ್ಯಾಪಾರ ಹೇಗೆ ನಡೆಯುತ್ತದೆಂಬುದನ್ನು ಹೇಳಿದೆ. ಸಿಲ್ಕ್ ವಿಚಾರದಲ್ಲಿ ಏನಾಗುತ್ತದೆಂಬುದನ್ನು ಕೆಲವರು ಹೇಳಿದರು. ಹೀಗೆ ಇರುವ ಪರಿಸ್ಥಿತಿ ನಮಗೆ ಚೆನ್ನಾಗಿ ಮನದಟ್ಟು, ಆದ ಹಾಗಾಯಿತು. ಈಗಿರುವ ಅಳತೆ ಮತ್ತು ತೂಕಗಳಲ್ಲಿ ಒಂದು ಸ್ಟಾಂಡರ್ಡ್ ಇಲ್ಲ, ಸ್ಪೆಸಿಫೈಡ್ ವೆಯಿಟ್ಸ್ ಅಂಡ್ ಮೆಷರ್ಸ್ ಇಲ್ಲ. ಇದರಿಂದ ಉಭಯತ್ರರಿಗೂ ಮೋಸವಾಗಬಹುದು. ಇದನ್ನು ನಿಯಂತ್ರಿಸುವುದು ಅತ್ಯಗತ್ಯ. ಮನಬಂದಂತೆ ಒಬ್ಬನು ರೂಪಾಯಿಗೆ 16 ಆಣೆ ಎಂದು ಹೇಳುವುದು ಇನ್ನೊಬ್ಬ 15 ಆಣೆ ಎನ್ನುವುದು ಹೀಗೆಲ್ಲಾ ಮಾಡಿದರೆ ಹಣದ ಬೆಲೆಯ ವಿಚಾರದಲ್ಲಿ ಅನುಮಾನಕ್ಕೆ ಆಸ್ಪದವಾಗುತ್ತದೆ. ಹೈದರಾಬಾದ್ ಸ್ಟೇಪನ್ನಿನಲ್ಲಿ ಟೀಕುಡಿದು ಒಂದು ನಾಣ್ಯ ಕೊಟ್ಟರೆ ಚಿಲ್ಲರೆ ವಾಪಸ್ಸು ಕೊಡುವಾಗ ನಮ್ಮ ದೇಶದಲ್ಲಿ ನಡೆಯದಿರುವ ಬೇರೆ ಎರಡು ಮೂರು ನಾಣ್ಯ ಕೊಟ್ಟ. ಆಮೇಲೆ ನೋಡಿದರೆ ಅದು ಗೊತ್ತಾಯಿತು. ಅದು ನಮ್ಮಲ್ಲಿ ಉಪಯೋಗಕ್ಕೆ ಬರುವುದಿಲ್ಲ. ಆ ರೀತಿ ಆಗಬಾರದು. ದರದಲ್ಲೂ ಮತ್ತು ತೂಕಗಳಲ್ಲೂ ಕೊಂಡುಕೊಳ್ಳುವವನಿಗೂ ಮತ್ತು ಮಾರುವವನಿಗೂ ಮಧ್ಯೆ ಇರುವ ಏಜೆಂಟು ಪೋಸಮಾಡುವುದಕ್ಕೆ ಅವಕಾಶವಿರಬಾರದು. ಇದನ್ನು ತಡೆಗಟ್ಟಬೇಕಾದರೆ ಯಾವ ರೀತಿ ಮಾಡಬೇಕೆಂಬುದನ್ನು ಗಮನಿಸಬೇಕಾದುದು ಅವಶ್ಯಕ. ಮ್ಯಾನುಫ್ಯಾಕ್ಚರಿಂಗ್, ಇಷ್ಯೂಯಿಂಗ್, ಮತ್ತು ಯೂಸಿಂಗ್, ಈ ಮೂರು ವಿಷಯಗಳಲ್ಲೂ ಇರುವ ತೊಂದರೆಗಳು ನಿವಾರಣೆಯಾಗಬೇಕು. ಯಾರೋ ಮನವಿ ಮಾಡಿದರೆಂದು ಮಸೂದೆತಂದು ಈ ರೀತಿ ಅಂಗೀಕಾರ ಪಡೆಯುವುದು ನರಿಯಲ್ಲ. "It is not the dog that is wagging the tail; it is the tail that is wagging the dog." 1902 ರಲ್ಲಿ ರೀಜೆಂಟ್ ಮಹಾರಾಣಿಯವರು ಮಾಡಿರುವ ಕಾನೂನು ಇದುವರೆಗೂ ನಡೆದುಕೊಂಡು ಬಂದಿದೆ. ಇರುವ ಕಾನೂನನ್ನೇ ಸಂಪೂರ್ಣವಾಗಿ ಕಾರ್ಯತಃ ಎಫೆಕ್ಟೀವ್ ಆಗಿ ಮಾಡಲು ಸರ್ಕಾರಕ್ಕಮ ಕೈಗೊಂಡಿಲ್ಲ. ಇಂಥಾದ್ದೊಂದು 1902 ನೆಯ ಇಸವಿಯ ಕಾನೂನಿದೆಯೆಂದು ನಮ್ಮ ಕಡೆ ಹೇಳಿದೆ. ಆದರೆ ಅಲ್ಲಿ ಯಾರನ್ನು ಕೇಳಿದರೂ ಅದು ತಮ್ಮ ಕಡೆಯಲ್ಲಿ ಜಾರಿಯಲ್ಲಿಲ್ಲವೆಂದು ಹೇಳುತ್ತಾರೆ. ಹೀಗಿದೆ ನಮ್ಮ ಕಡೆಯ ಪರಿಸ್ಥಿತಿ. ಮೊನ್ನೆತಾನೆ ನಮ್ಮ ತಾಲ್ಲೂಕಿನಲ್ಲಿ ಶಿವಮೊಗ್ಗದಲ್ಲಿರತಕ್ಕವರು ಕೂಡ ಹಳ್ಳಿಗಳ ಕಡೆ ಹೋಗಿ ಗೇಣಿಯನ್ನು ಒಂದು ವರ್ಷಕ್ಕೆ ಬರೆಸಿರುತ್ತಾರೆ. ಗೇಣಿ ಕಾನೂನಿದೆಯೆಂದು ಯಾರಾದರೂ ಹೇಳಿದರೆ, "ಎಲ್ಲಿದೆ ಗೇಣಿ ಕಾನೂನು! ಗೋಪಾಲಗೌಡ ಬಂದು ಹೇಳಿದಾಕ್ಷಣ ಆಯಿತೇ! ಬರಿ, ಬರಿ ಒಂದು ವರ್ಷಕ್ಕೆ" ಎಂದು ಹೇಳಿ ಕರಾರು ಬರೆಸಿಕೊಳ್ಳುತ್ತಿದ್ದಾರೆ. ಅದನ್ನು ಇಲ್ಲಿ ಬಂದು ಹೇಳಿದರೆ, "ನಾನು ಹೋಗಲೇ, ಬರೆಸುವುದಕ್ಕೆ!" ಎಂದು ಮಂಜಪ್ಪನವರು ಹೇಳಿದರೆ ನಾನೇನು ಹೇಳಲಿ!

ಹೀಗಾಗಬಾರದು. ನೀವು ಮಾಡುವ ಆಕ್ಟುಗಳು ಎಲ್ಲರಿಗೂ ಗೊತ್ತಾಗುವಂತಾಗಬೇಕು.

ಆದ್ದರಿಂದ ಕಾನೂನು ಮಾಡುವುದೇ ಮುಖ್ಯವಲ್ಲ. ಈಗಲೂ, ನಿಮ್ಮಲ್ಲಿರತಕ್ಕ ಕಾನೂನಿನಲ್ಲೂ ಕೂಡ false ಆಗಿರುವ ತೂಕ ಮತ್ತು ಅಳತೆಯ ಸಾಧನಗಳ ಬಗ್ಗೆ ಶಿಕ್ಷೆ ಮಾಡಬಹುದಾಗಿದೆ. ಅದನ್ನು ಮಾಡುತ್ತಿಲ್ಲ. ನಮ್ಮನ್ನೆ ಸರ್ಕಾರಗಳು ಪರಂಪರಾಗತವಾಗಿ ಬರುತ್ತಿವೆ.

ಶ್ರೀ ಎಚ್. ಸಿದ್ದವೀರಪ್ಪ.—ಅವರು ಗೆಜೆಟ್ಟು ಮುಂತಾದವುಗಳನ್ನು ಓದುತ್ತಾರೆಂದು ತಿಳಿದುಕೊಂಡಿದ್ದೇವೆ. 1902 ರ ಆಕ್ಟಿನಲ್ಲಿ 'Government may from time to time by notification extend this to that part of the State which they please . . .' ಎಂದು ಹೇಳಿದೆ. ಆದ್ದರಿಂದ ಆ ಆಕ್ಟು ಕೆಲವು ಕಾಲ ಅನ್ವಯವಾಗದೆ ಹಾಗೆಯೇ ಇತ್ತು. ಮೊನ್ನೆ ತಾನೆ ಆರ್ಡೋಬರ್ 1954 ರಲ್ಲಿ ಇಡೀ ನಂಸ್ಥಾನಕ್ಕೆ ಅನ್ವಯವಾಗುವ ಹಾಗೆ ಮಾಡಿದ್ದೇವೆ. ಆದ್ದರಿಂದ ನಮ್ಮ ನಂಸ್ಥಾನದಲ್ಲಿ ಕಾನೂನಿದ್ದರೂ ಅದನ್ನು extend ಮಾಡದೆ ಇದ್ದುದರಿಂದ ತಮ್ಮ ಕಡೆಯಲ್ಲಿ ಗೊತ್ತಾಗಿರಲಿಲ್ಲ ವೆಂದು ಕಾಣುತ್ತದೆ.

Mr. SPEAKER.—The Hon'ble Member has taken more than one hour. He should also feel the sense of theHouse.

ಶ್ರೀ ಎಸ್. ಗೋಪಾಲಗೌಡ.—ಇನ್ನು ಹದಿನೈದು ನಿಮಿಷ ಮಾತನಾಡಿ ಮುಗಿಸುತ್ತೇನೆ.

Mr. SPEAKER.—There is also a limit for the speeches to be made. I request the Hon'ble Members to enable the House to proceed with the Bills. The Chair has got powers to curtail the speeches. But I do not want to use it. There are so many Bills to be disposed of. It is the concern of the House to pass these Bills in the interests of the people. If these Bills are not passed, the people will suffer, not the Government or we.

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಮಾನ್ಯ ಸದಸ್ಯರು ಕಾಗೋಡಿನ ಕಥೆ, ಹೈದರಾಬಾದಿನ ಯಾತ್ರೆ, ಚೆನೆನ್ಸಿ ಆಕ್ಟು ಮುಂತಾದುವುಗಳ ಮೇಲೆಲ್ಲಾ ಮಾತನಾಡುತ್ತಾ ಮುಂದುವರಿಸುತ್ತಿದ್ದಾರೆ. ಅವರು ದಯವಿಟ್ಟು ಈ ಮಸೂದೆಯಲ್ಲಿ ಅಡಕವಾಗಿರುವ ವಾಕ್ಯಗಳನ್ನು ಬೇಕಾದರೆ ತೆಗೆದುಕೊಂಡು ಪರವಾಗಿಯಾಗಲೆ ವಿರುದ್ಧವಾಗಿಯಾಗಲಿ ಮಾತನಾಡಲಿ. ಅದು ಬಿಟ್ಟು ಬೇರೆ ವಿಷಯಗಳನ್ನು ಮಾತನಾಡುವುದಕ್ಕೆ ಈ ನಭೆಯ ಕಾಲವನ್ನು ಉಪಯೋಗಿಸುವುದು ಉಚಿತವಲ್ಲ.

ಶ್ರೀ ಎಸ್. ಗೋಪಾಲಗೌಡ.—ಅವರು relevancy ವಿಚಾರವನ್ನು ತಮ್ಮ ಗಮನಕ್ಕೆ ತಂದರು. 'ಗೋಪಾಲಗೌಡ ಈ ಮಸೂದೆಯ ಸಂದರ್ಭದಲ್ಲಿ ತನ್ನ ಹೈದರಾಬಾದಿನ ಯಾತ್ರೆ, ಕಾಗೋಡಿನ ಕಥೆ, ಚೆನೆನ್ಸಿ ಆಕ್ಟು ಎಲ್ಲವನ್ನೂ ಪ್ರಸ್ತಾಪಿಸುತ್ತಿದ್ದಾನೆ' ಎಂದು ಹೇಳಿದರು. ಕಾಗೋಡಿನ ವಿಚಾರ ಏಕೆ ಹೇಳಿದೆನೆಂಬುದನ್ನು ಮಾನ್ಯ ಸದಸ್ಯರಿಗೆ ಸ್ವಲ್ಪ ವಿಶದ ಪಡಿಸಬೇಕಾಗಿದೆಯೆಂದು ಕಾಣುತ್ತದೆ. ಬತ್ತವನ್ನು ಅಳೆಸುವಾಗ . . .

Sri A. BHEEMAPPA NAIK.—Regarding relevancy or irrelevancy, the Chair is the Judge. I am sure the Chair will take care of it.

Sri S. GOPALA GOWDA.—Is there any point of order involved, Sir ?

Mr. SPEAKER.—I have already answered that. The Hon'ble Member need not reply. I may bring to the notice of the House that Members can only address the Chair and if there is any point of order, it is the Chair that will give a ruling. Therefore, the Hon'ble Member need not take notice of it. Hon'ble Members must understand that if they go on replying to each point raised by a member, the continuity of his speech will break of. I am here to see whether he speaks relevantly or not.

ಶ್ರೀ ಎಸ್. ಗೋಪಾಲಗೌಡ.—ಏಕೆಂದರೆ, ಆ ರೀತಿಯಾಗಿ ನಾನು irrelevant ಆಗಿ ಮಾತನಾಡಿಕೊಂಡು ಹೋಗುತ್ತಿದ್ದೇನೆಂದು ತಾವು ಭಾವಿಸುವುದಾದರೆ ನಾನೇ ನಿಲ್ಲಿಸಿಬಿಡುತ್ತೇನೆ. I am also bound by rules and procedure. ನಾನೂ ಅವುಗಳನ್ನು ಓದಿದ್ದೇನೆಂದು ಮಾತ್ರ ಅವರಿಗೆ ತಿಳಿಸಿದರೆ ಸಾಕು.

ಆಮೇಲೆ ಈ ಮಸೂದೆಯ ನಾಲ್ಕನೆಯ ಕ್ಲಾಜಿನಲ್ಲಿ "Any weight or measure of capacity which is not in accordance with a copy of the Standard weight or measure of capacity kept under Section 2 (2) shall be deemed to be a false weight or measure of capacity within the meaning of Chapter XIII of the Indian Penal Code.' ಎಂದು ಹೇಳಿದೆ.

ಇಂಡಿಯ ಪೀನಲ್ ಕೋಡಿನಲ್ಲಿ ಕೂಡ ಇಂಥ ಅಕ್ರಮ ವ್ಯವಹಾರಗಳು ನಡೆದರೆ ಅವುಗಳನ್ನು ಸರಿಪಡಿಸುವುದಕ್ಕೂ ಮತ್ತು ಅಂಥ ಅಕ್ರಮ ನಡವಳಿಕೆಗಳನ್ನು ನಡೆಸಿದವರ ಮೇಲೆ ಕಾನೂನು ಪ್ರಕಾರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪೋಲೀಸಿನವರಿಗೆ ಅಧಿಕಾರ ಕೊಡಲಾಗಿದೆ. ಆ ಪ್ರಾವಿಜಿ ಅನ್ನೇ ಈ ಸಂದರ್ಭದಲ್ಲಿ ಈ ಮಸೂದೆಯಲ್ಲಿಯೂ ಕೂಡ ಈಗ ಮಾಡಿದ್ದಾರೆ. ಆದರೆ ಇಲ್ಲಿಯತನಕ ಏನಾಗಿದೆ ಅನ್ನುವುದನ್ನು ನೋಡಿದರೆ ಕಾರ್ಯತಃ ಏನೂ ಆಗಿರುವುದಿಲ್ಲ. ಆದರೆ ಇಂಥ ಅಕ್ರಮ ಅಳತೆ ಮತ್ತು ತೂಕಗಳ ಉಪಯೋಗವನ್ನು ತಡೆಗಟ್ಟಲು ಮಾನ್ಯ ಮಂತ್ರಿಗಳು ಎಷ್ಟು ಆಸಕ್ತರಾಗಿದ್ದಾರೋ ಆ ಬಗ್ಗೆ ನಾನೂ ಕೂಡ ಅವುಗಳ ಬಳಕೆಯನ್ನು ತಡೆಗಟ್ಟಲು ಆಸಕ್ತಿಯುಳ್ಳವನಾಗಿದ್ದೇನೆ. ಆದರೆ ಇಲ್ಲಿಯವರೆಗೂ ಸರ್ಕಾರದವರು ಇಂಥ ಅಕ್ರಮ ಅಳತೆಯ ಮತ್ತು ತೂಕದ ಸಾಧನಗಳನ್ನು ಯಾರುಯಾರು ಉಪಯೋಗಿಸುತ್ತಿದ್ದಾರೋ ಅಂಥವರನ್ನು ಕಂಡುಹಿಡಿದು ಅವರ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕ ಬಗ್ಗೆ ಅನೇಕ ಇನ್‌ಸ್ಪೆಕ್ಟರುಗಳನ್ನು ನೇಮಕ ಮಾಡಿರುತ್ತಾರೆ. ಆದರೆ ಹಾಗೆ ಅವರು ಇಲ್ಲಿಯತನಕ ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ? ಎಷ್ಟರಮಟ್ಟಿಗೆ

(ಶ್ರೀ ಎಸ್. ಗೋಪಾಲಗೌಡ.)

ಈ ಅಕ್ರಮಗಳನ್ನು ಅವರು ತಡೆಗಟ್ಟಿದ್ದಾರೆ ? ಈ ದಿವಸ ಈ ಅಳತೆ ಮತ್ತು ತೂಕಗಳ ವಿಚಾರದಲ್ಲಿ ಎಷ್ಟೆಷ್ಟು ಅಕ್ರಮಗಳು ನಡೆಯುತ್ತಿವೆ ಎನ್ನುವುದು ಎಲ್ಲರಿಗೂ ಗೊತ್ತೇ ಇದೆ. ಆದುದರಿಂದ ಈ ಅಕ್ರಮಗಳನ್ನೆಲ್ಲಾ ತಡೆಗಟ್ಟಬೇಕೆಂದು ಹೇಳುವುದು ಅಗತ್ಯವಾದ ವಿಚಾರವೇ ಹೌದು. ಆದರೆ ಈಗ ಇದನ್ನು ಹೇಗೆ ಹಿಡತಕ್ಕೆ ತರುವುದು ಎನ್ನತಕ್ಕದ್ದೇ ನಮ್ಮ ಮುಂದಿರತಕ್ಕ ಮುಖ್ಯ ಪ್ರಶ್ನೆ. ಸರ್ಕಾರದವರು ಜನರಿಗೆ ತೊಂದರೆ ಮಾಡಬೇಕೆಂಬ ಉದ್ದೇಶದಿಂದೇನೂ ಇದನ್ನು ತಂದಿಲ್ಲ ಎನ್ನುವ ವಿಚಾರ ನಮಗೆ ಗೊತ್ತಿದೆ. ಆದರೆ ತಾವು ಇಲ್ಲಿಯತನಕ ಹೀಗೆ ತಪ್ಪು ಮಾಡತಕ್ಕವರ ಬಗ್ಗೆ ನೂಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಜನರಿಗೆ ಯಾವುದು ಸರಿಯಾದ ಅಳತೆ ಸಾಧನ, ಯಾವುದು ಸರಿಯಾದ ತೂಕದ ಸಾಧನ ಎನ್ನುವುದನ್ನು ಅವರಿಗೆ ಸರಿಯಾಗಿ ತಿಳಿವಳಿಕೆಕೊಟ್ಟು ಅವರಿಗೆ specific ಆಗಿ ಇಂಥಿಂಥ standard ಅಳತೆ ಮತ್ತು ತೂಕದ ಸಾಧನಗಳನ್ನೇ ಉಪಯೋಗಿಸಬೇಕು, ಇಲ್ಲದಿದ್ದರೆ ಅದು ತಕ್ಕೀರಾಗುತ್ತದೆ ಎಂದು ತಿಳಿಸತಕ್ಕ ಕಾರ್ಯಕ್ರಮಗಳನ್ನು ತಾವು ಕೈಗೊಂಡಿಲ್ಲ. ಹೀಗಾಗಿ ತಾವು ಯಾವ ಒಂದು ಬಾಬನಲ್ಲೇ ಆಗಲಿ ಒಂದು ಸರಿಯಾದ ಸೇರು, ಒಂದು ಸರಿಯಾದ ಗಜಕಡ್ಡಿ ಇತ್ಯಾದಿಗಳ ಬಗ್ಗೆ ಒಂದು ಸ್ಪೆಸಿಫಿಕ್ ಸ್ಟ್ಯಾಂಡರ್ಡನ್ನು ತಾವು ನಿಗದಿಮಾಡಿಲ್ಲ. ಈಗ ಇವುಗಳನ್ನು ನಿಗದಿ ಮಾಡಲು ಹೊರಟಿದ್ದೀರಿ. ಆದರೆ ಈ ಹಿಂದೆ ಏನು ಒಂದು ಕಾನೂನಿತ್ತೋ ಅದರಂತೆಯೇ ಮುಂದಕ್ಕೂ ನಡೆಯುವುದಾದರೆ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಈ ಮಸೂದೆಯು ಮುಂದೆ ಕಾನೂನಾಗಿ ಬಂದಾಗ ಜನರಿಗೊಂದು ತೊಂದರೆಯಾಗದಂತೆಯೂ, ಸರ್ಕಾರದವರಿಗೆ ತಪ್ಪಿತಸ್ಥರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗಿಯೂ ಇರುವಂತೆ ಒಂದು ವ್ಯವಸ್ಥೆ ಮಾಡತಕ್ಕ ಬಗ್ಗೆ ಇಂದು ಈ ಮಾನ್ಯ ಸಭೆ ಆಲೋಚನೆಮಾಡಬೇಕಾದದ್ದು ಬಹು ಮುಖ್ಯವಾದಂಥಾ ವಿಚಾರ. ಈಗ ಉದಾಹರಣೆಗೆ ಹೇಳುವುದಾದರೆ ಈ ಮಸೂದೆಯಲ್ಲಿ ಒಂದು ಪೀನಲ್ ಕ್ಲಾಜನ್ನು ಹಾಕಿದ್ದಾರೆ. ಆದರೆ ಅದು ಬಹಳ ಕಠಿಣವಾಗಿದೆ. ಅಷ್ಟೊಂದು ಕಾಠಿಣ್ಯವಾದಂಥಾ ಕ್ಲಾಜನ್ನು ಹಾಕತಕ್ಕ ಅಗತ್ಯವೇನಾದರೂ ಇದೆಯೇ ಅಥವಾ ಇಲ್ಲವೇ ಅನ್ನುವುದನ್ನು ಪರಿಶೀಲಿಸಬೇಕಾದ್ದು ಅತ್ಯಾವಶ್ಯಕ. ಸರ್ಕಾರದವರು ನಾವು ಬೇರೆ ಯಾವ ಜನಗಳಿಗೂ ಅನಾನುಕೂಲವಾಗದಂತೆ ಇದನ್ನು ಮಾಡುತ್ತೇವೆ ಮತ್ತು ಯಾರುಯಾರು ಈ ತೂಕ ಅಳತೆ ಇತ್ಯಾದಿಗಳಲ್ಲಿ ಅನ್ಯಾಯ ಮಾಡುತ್ತಿದ್ದಾರೋ ಅಂಥವರ ಬಗ್ಗೆ ಮಾತ್ರ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ ಎಂದು ಒಂದು ಆಶ್ವಾಸನವನ್ನು ಈ ದಿವಸ ನನಗೆ ಕೊಡಬಹುದು. ಆದರೆ ತಾವು ಈ ಪೀನಲ್ ಕ್ಲಾಜಿನಲ್ಲಿ ಹೇಳಿರತಕ್ಕ ರೀತಿಯಲ್ಲಿ ಅಧಿಕಾರ ಕೊಟ್ಟರೆ ಅನೇಕ ಸಂದರ್ಭಗಳಲ್ಲಿ ಜನರು ಅಕ್ರಮವಾದ ಅಳತೆ, ಸೇರು, ಬಟ್ಟುಗಳನ್ನಿಟ್ಟುಕೊಂಡಿದ್ದಾರೆಂದು ಅವರಮೇಲೆ ಕೇಸ್ ಹಾಕಿಬಿಡುತ್ತಾರೆ. ಆಗ ನಮಗೆ ಅನವಶ್ಯಕವಾಗಿ ತೊಂದರೆಯುಂಟಾಗುತ್ತದೆ. ಅತನು ಕೋರ್ಟು ಕಛೇರಿಗಳಿಗೆ ತಿರುಗಬೇಕಾಗುತ್ತದೆ. ಆದರೆ ನಾವು ಈ ದಿವಸ ಇಂಥಿಂಥಾ ಸೇರುಗಳನ್ನೇ ಇಂಥಿಂಥಾ ತೂಕದ ಸಾಧನಗಳನ್ನೇ ಸರಬರಾಯಿ ಮಾಡಿದ್ದೇವೆ, ಜನರು ಅವುಗಳನ್ನೇ ಉಪಯೋಗಿಸಬೇಕು, ಹಾಗೆ ಜನರು ಉಪಯೋಗಿಸದೆ ಹೋದರೆ ಅವರಿಗೆ ಶಿಕ್ಷೆಯಾಗಬೇಕಾಗುತ್ತದೆ. ಎನ್ನತಕ್ಕ ಅರ್ಥ ಈಗ ಈ ಕ್ಲಾಜಿನಲ್ಲಿದೆ. ಇವೊತ್ತು ಒಮ್ಮೆಗೇ ನಾವು ಇದನ್ನು ಹೇಳಿಬಿಟ್ಟು, we have not thought of giving orders for manufacturing these weights and measures to any concern at all. ಯಾವುದಕ್ಕೆ ಕೂಡಬೇಕು ಎಂಬುದೇ ಕಷ್ಟವಾಗಿದೆ. ಅಂಥ specification ಪ್ರಕಾರ manufacture ಮಾಡತಕ್ಕವರು ನಮ್ಮ ಸಂಸ್ಥಾನದಲ್ಲಿದ್ದಾರೆಯೇ ಎನ್ನತಕ್ಕದ್ದು ಅನುಮಾನವಾಗಿದೆ. ಅಂಥದ್ದರಲ್ಲಿ ಇಷ್ಟೊಂದು Penal Clauses ಸೇರಿಸಿಕೊಂಡು ತಂದಿರುವ ಈ ಮಸೂದೆಯನ್ನು ಚರ್ಚೆಮಾಡದೆ, ಆಗಲಿ ಎಂದು ಒಪ್ಪಿಕೊಂಡರೆ ಪರಿಣಾಮದಲ್ಲಿ ಸಹಸ್ರಾರು ಜನರನ್ನು ತೊಂದರೆಗೀಡುಮಾಡಬಹುದಾಗಿದೆ. ಆದ್ದರಿಂದ ಇದನ್ನು ಈ ಮಾನ್ಯ ಸಭೆ ಪರಿಶೀಲನೆ ಮಾಡಬೇಕು. ನಾನು ಹೇಳಿದಹಾಗೆ ಮೂಲ ಕಾನೂನಿಗಿಂತ ತಿದ್ದುಪಡಿಗಳು ಬಹಳವಿವೆ ಎಂಬ ವಿಷಯವನ್ನು general ಆಗಿ ಹೇಳಬೇಕಾದರೆ, ನಮ್ಮಲ್ಲಿ ಈ ಮಸೂದೆಗಳನ್ನು ಬರೆಯತಕ್ಕ ಸೆಕ್ಷನ್ ಸಮರ್ಪಕವಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಅನೇಕ ವೇಳೆ ಹೊಸ ಕ್ಲಾಜುಗಳನ್ನು insert ಮಾಡುತ್ತಿದ್ದಾರೆ. ಇಂಥದ್ದೇ ಒಂದು ಕ್ಲಾಜ್ ಮುಂದೆ ಇದರಲ್ಲಿದೆ. Tenancy legislation ವಿಷಯದಲ್ಲಿ ಸ್ವಲ್ಪ ಅವರ ಹತ್ತಿರದಲ್ಲಿ ಇರಬೇಕಾಯಿತು. ಆವಾಗ ನಾನು ನೋಡಿದೆ. ಈಗ ಸಭೆಯು ಗಮನಕ್ಕೆ ತರಬೇಕಾದರೆ ತಿರುವಾಂಕೂರು-ಕೊಚ್ಚಿನಿಂದ ನಮ್ಮವರು 7-8 ಬಲ್ಲುಗಳನ್ನು ತರಿಸಿದರು. ನನಗೆ ಅವನ್ನು ಓದುವ ಅವಕಾಶ ದೊರೆಯಿತು. ಅದು ಬಹಳ ಸ್ಪಷ್ಟಕರವಾದ ಅರ್ಥ ಬರತಕ್ಕಂಥ ಸ್ಪಷ್ಟವಾದ simple termsನಲ್ಲಿ direct transitive verb ನಲ್ಲಿ ಬರೆಯಲ್ಪಟ್ಟಿತ್ತು.

Sri H. SIDDAVEERAPPA.—That is not good draftsmanship at all.

ಶ್ರೀ ಎಸ್. ಗೋಪಾಲಗೌಡ.—Good draftsmanship ಅಲ್ಲವೆಂದು ವಕೀಲರು ಹೇಳತಕ್ಕದ್ದು. ವಕಾಲತ್ತಿಗೆ ಬಹಳ ಕಡಿಮೆ ಅವಕಾಶವಿರಬೇಕೆನ್ನುವುದು ನನ್ನ ಅಭಿಪ್ರಾಯ. ಇಬ್ಬರು ಗೌರವಸ್ಥರು ಈ ಕ್ಲಾಜಿನ ದೆಸೆಯಿಂದ ಮೂರನೆಯವರ ಹತ್ತಿರ ಹೋಗಬೇಕು. ಒಬ್ಬನು ಯಾವ ಮಟ್ಟದಲ್ಲಿರುವ ಲಾಯರನ್ನು ಹಿಡಿದನೋ ಅದೇ ಮಟ್ಟದಲ್ಲಿರುವ ಲಾಯರನ್ನೇ ಇನ್ನೊಬ್ಬನೂ ನೇಮಿಸಬೇಕಾಗುತ್ತದೆ. ಹೀಗೆ ಒಬ್ಬನು ಬೆಂಗಳೂರಿಗೆ ಬಂದು ಹೈಕೋರ್ಟು ಲಾಯರನ್ನು engage ಮಾಡಿದರೆ ಇನ್ನೊಬ್ಬನೂ ಅಂಥವನನ್ನೇ ತರಬೇಕು ಎಂದು ಮದರಾಸ್ ಅಥವಾ ಬೊಂಬಾಯಿಗೆ ಹೋಗಿ ವಿಮಾನದಲ್ಲಿ ಬರುವವರನ್ನೇ ಕರೆದುಕೊಂಡು ಬರುತ್ತಾನೆ. ಇಲ್ಲದಿದ್ದರೆ ಅದೇ ಮಟ್ಟದಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ವಕಾಲತ್ತು ಹೆನ್ನಾಗಿರುವವರು "provided that" ಎಂದು ಏನೋ ಉಪಯೋಗಿಸುತ್ತಾರೆ. ನನಗೆ ಇಂಗ್ಲಿಷ್ ಕಡಿಮೆ ಬರುತ್ತದೆ. ನಾನು ಕೆಲವು clauses ಓದಿದ್ದೇನೆ. ಕೆಲವು ಕಡೆ "notwithstanding that" ಎಂಬ ಪದಗಳನ್ನು ಉಪಯೋಗಿಸಿ ಕೆಲವು ಕಡೆ ಮೇಲಿನ ಕ್ಲಾಜ್‌ಗಳನ್ನು nullify ಮಾಡಿರುತ್ತಾರೆ. ಅಂಥದನ್ನು ನೋಡಬಹುದು. Interpretation ಬಹಳ ಬಂದಿರತಕ್ಕ ವಿಷಯದಲ್ಲಿ ಈ ರೀತಿ ಬರುತ್ತದೆ. ಸಾಧ್ಯವಾದ ಮಟ್ಟಿಗೂ ಇದನ್ನು ಕಡಿಮೆಮಾಡಿ.

Sri H. SIDDAVEERAPPA.—It is not possible to avoid.

ಶ್ರೀ ಎಸ್. ಗೋಪಾಲಗೌಡ.—ತಿರುವಾಂಕೂರು-ಕೊಚ್ಚಿನವರ ಬಿಲ್‌ನಲ್ಲಿ ಉಪಯೋಗಿಸಿರುವ ಭಾಷೆಗೂ, ನಮ್ಮ ಬಿಲ್‌ನಲ್ಲಿ ಉಪಯೋಗಿಸಿರುವ ಭಾಷೆಗೂ ವ್ಯತ್ಯಾಸವಿದೆಯೇ ಇಲ್ಲವೇ ಎಂದು ತಾವೇ ಆ ಬಿಲ್‌ಗಳನ್ನು ಪರಾಂಬರಿಸಿ ಕಂಡುಕೊಳ್ಳಬಹುದು ನಾವು ಮಾಡುವುದು ಸಾರ್ವಜನಿಕರಿಗೆ ಸಹ ಅರ್ಥವಾಗಬೇಕು. ವಕೀಲರಿಗೆ ಮಾತ್ರ ಅರ್ಥವಾದರೆ, ಕೋರ್ಟುಗಳಲ್ಲಿ ನ್ಯಾಯಾಧೀಶರುಗಳಿಗೆ ಮಾತ್ರ ಅರ್ಥವಾದರೆ ಸಾಲದು. ಸಾಮಾನ್ಯ ಜನತೆಗೆ ಅರ್ಥವಾಗಬೇಕು. ಯಾರ ತಲೆ ಹೋಗುವುದಕ್ಕೂ ಕಾನೂನು ಮಾಡುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಎಲ್ಲರೂ ಒಪ್ಪುವ ಹಾಗೆ ಸುಲಭವಾಗಿ ಬರೆದಿದ್ದಾರೆ. ಇದರಲ್ಲಿ ಎಷ್ಟು comment ಬರುತ್ತದೆಯೋ ನೋಡೋಣ. ತಪ್ಪು ಇದ್ದರೆ ಅದನ್ನು ತೋರಿಸಬೇಕೇ ಹೊರತು ಹಾಗಿರಬೇಕು, ಹೀಗಿರಬೇಕು ಎಂದು ಹೇಳುವುದು ಸರಿಯಲ್ಲ.

Mr. SPEAKER.—Hon'ble Member can point out the particular provisions.

ಶ್ರೀ ಎಸ್. ಗೋಪಾಲಗೌಡ.—15ನೆ ಸೆಕ್ಷನ್ 2ನೆ ಕ್ಲಾಜ್ ಚರ್ಚೆಗೆ ಬಂದಾಗ ಮಾನ್ಯ ಮಂತ್ರಿಗಳು ಇಂಥ ಒಂದು ಕ್ಲಾಜ್ ಮುಂಬಯಿ ಆಕ್ಟ್‌ನಲ್ಲಿದೆ ಅದನ್ನು ಇಲ್ಲಿಯೂ ಇಟ್ಟಿದ್ದೇವೆಂದು ಹೇಳಿದರು.

Sri H. SIDDAVEERAPPA.—He tears my speech into parts and parts. ಬೊಂಬಾಯಿನಲ್ಲಿದೆ, ಅದಕ್ಕೋಸ್ಕರ ಇಲ್ಲಿಯೂ ಇಟ್ಟಿದ್ದೇವೆಂದು ಹೇಳಲಿಲ್ಲ. ವ್ಯಾಖ್ಯಾನ ಮಾಡುವುದಕ್ಕೆ ನಮಗೂ ಬರುತ್ತದೆ. ಅದೇರೀತಿಯಾಗಿ ಸರಿಯಾದ ಒಂದು ವ್ಯಾಖ್ಯಾನವನ್ನು ನನಗೂ ಹೇಳಿದೆ.

12-30 P.M.

ಶ್ರೀ ಎಸ್. ಗೋಪಾಲಗೌಡ.—ಅವರು ಉತ್ತರ ಹೇಳುವಾಗ ಇದನ್ನು clarify ಮಾಡಿ ಎಂದು ಕೇಳಿದರೆ ಇದು ಬೇಕೇ ಬೇಕು ಎಂದು ಹೇಳುತ್ತಾರೆ. ಈ ಎರಡನೇ ಪ್ರೊವಿಜಿಸ್ ಏಕೆ ಬೇಕು ಎಂಬುದನ್ನು ತಾವು ಹೇಳಿ, ಮತ್ತು ಇದನ್ನು ಅವನು ಹೇಗೆ ನದುಪಯೋಗಪಡಿಸುತ್ತಾನೆ ಎಂಬುದನ್ನು ಹೇಳಿ ಎಂದು ಮಾನ್ಯ ನದಸ್ಯರು ಒತ್ತಾಯಮಾಡಿದಾಗ ಅದು ನಮಗೆ ಗೊತ್ತು ಎಂದು ಹೇಳಬಹುದು. ಮುಂಬೈನಲ್ಲೂ ಇಂಥ ಕಾನೂನು ಇದೆ. ಅಲ್ಲೂ ಸಹ ತೊಂದರೆ ಬಂದಿದೆ ಎಂದು ಏನೂ ಗೊತ್ತಾಗಿಲ್ಲ, ಆದ್ದರಿಂದ ಇದನ್ನು ಇಟ್ಟುಕೊಳ್ಳುವುದರಿಂದ ಯಾವ ಅಡ್ಡಿಯೂ ಇರಲಾರದು ಎಂದು ವಿವರಣೆ ಕೊಟ್ಟಿದ್ದರೆ ಚೆನ್ನಾಗಿತ್ತು. ಇಲ್ಲ ಸ್ವಲ್ಪ ಡ್ರಾಫ್ಟ್‌ಮೆಷಿಪ್ ಚೆನ್ನಾಗಿಲ್ಲ. ಬೇರೆಯ ಕಾನೂನನ್ನು ಅಲ್ಲಿ ಇದ್ದಕ್ಕಿದ್ದ ಹಾಗೆ ಕಾಪಿಮಾಡದೆ ಇರಬಹುದು. ಕೆಲವು ಸಾರಿ ನಾವು ಸರಿಯಾಗಿದೆ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ನಾವು ಸ್ವಲ್ಪ ಇದರ ಬಗ್ಗೆ ನಾವು ಸ್ವಂತವಾಗಿ ವಿಚಾರವನ್ನು ಮಾಡಬೇಕೇ ಬೇಡವೇ ಎಂಬುದನ್ನು ಪೂರ್ವಭಾವಿಯಾಗಿ ವಿಚಾರಮಾಡಿ ಸಾಧ್ಯವಾದ ಮಟ್ಟಿಗೂ ಕಾನೂನಿನ ದೃಷ್ಟಿಯಿಂದಲೂ ನೋಡಬೇಕು ಮತ್ತು ರಾಜ್ಯಾಂಗದ ದೃಷ್ಟಿಯಿಂದಲೂ ನೋಡಬೇಕು. Legal ಆಗಿ ಎಷ್ಟುಮಟ್ಟಿಗೆ ಇದನ್ನು ಎಲ್ಲಾ ಕೋರ್ಟಿನಲ್ಲೂ uphold ಮಾಡುತ್ತಾರೆ ಎನ್ನುವುದು ಮುಖ್ಯವಾದ ವಿಚಾರ. ಅನಂತರ ಇದನ್ನು ಕಾರ್ಯರೂಪಕ್ಕೆ ತಂದಾಗ ಕಾರ್ಯತಃ ಸಾರ್ಥಕವಾಗುತ್ತದೆಯೆ ಎಂಬುದು ಇನ್ನೊಂದು ಅಂಶ.

Sri A. BHEEMAPPA NAIK.—Is it a speech on the Bill or is it an advice on drafting the Bill, I want to know.

Sri S. GOPALA GOWDA.—The Chair may direct me if I am speaking on any irrelevant facts, Sir.

Mr. SPEAKER.—Too much of dilation is not good.

Sri T. C. BASAPPA (Tarikere).—He has not shown any single defect in the drafting.

ಶ್ರೀ ಎಸ್. ಗೋಪಾಲಗೌಡ.—ತರೀಕೆರೆಯಿಂದ ಬಂದಿರುವ ಮಾನ್ಯನದಸ್ಯರ ಅಭಿಪ್ರಾಯ ಏನು ಎಂಬುದನ್ನು ತಿಳಿದುಕೊಂಡಿದ್ದೇನೆ. ನಾನು ಹೇಳುವುದು ಯಾವ ದೃಷ್ಟಿಯಿಂದ ಎಂಬುದನ್ನು ಕೂಡ justify ಮಾಡುತ್ತಾ ಇದ್ದೇನೆ. ಡ್ರಾಫ್ಟಿಂಗ್‌ನಲ್ಲಿ ಬಳಸಿರತಕ್ಕ ಭಾಷೆ ಬಹಳ ಬಳಸಾಗಿರುವುದರಿಂದ ನೇರವಾದ ಅರ್ಥ ಕೊಡುವುದಿಲ್ಲ . . . .

Mr. SPEAKER.—The House will rise and meet at 8-30 tomorrow morning.

The House adjourned at Thirty-Five Minutes past Twelve of the Clock to meet again the next day Saturday, 2nd April 1955 at Thirty Minutes past Eight of the Clock.

WD 4508—GPB—550—8-8-55